ಅಹರ್ನಿಶಂ ಜಾಗರಣೀಯಂ ಲೋಕಹಿತಂ ಮಮ ಕರಣೀಯಂ

ಪಾಕ್ಷಿಕ

# ಪ್ರಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ



**1936ರ ಬರ್ಲಿನ್ ಒಲಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದ ಭಾರತೀಯ ಹಾಕಿ ತಂಡ, ನೇತೃತ್ವ ವಹಿಸಿದ್ದವರು ಹಾಕಿಯ ದಂತಕಥೆಯೆಂದೇ ಖ್ಯಾತರಾದ ಮೇ. ಧ್ಯಾನ್‌ಚಂದ್ (ನಿಂತವರಲ್ಲಿ ಎಡದಿಂದ 2ನೆಯವರು). ಭಾರತದ ಅತ್ಯುನ್ನತ ಕ್ರೀಡಾ ಪ್ರಶಸ್ತಿ 'ಖೇಲ್ ರತ್ನ' ಇನ್ನು ಮುಂದೆ ಮೇ. ಧ್ಯಾನ್‌ಚಂದ್ ಅವರ ಸ್ಮರಣೆಯಲ್ಲಿ ನೀಡಲ್ಪಡಲಿದೆ.**

ಸಂಪುಟ : 43 | ಸಂಚಿಕೆ : 02 | ಪ್ಲವ – ಶ್ರಾವಣ | ಕಲಿಯುಗಾಬ್ದ 5123 | 01-09-2021 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4

# ಭರವಸೆಯ ಹಾದಿಯಲ್ಲಿ ಭಾರತೀಯ ಕ್ರೀಡಾರಂಗ

ಪ್ರತೀ ಬಾರೀ ಓಲಂಪಿಕ್ಸ್ ಕ್ರೀಡಾಕೂಟಗಳು ನಡೆದಾಗ ಪದಕಗಳ ಪಟ್ಟಿಯಲ್ಲಿ ಅಮೇರಿಕಾ, ಚೀನಾ, ಜಪಾನ್ ದೇಶಗಳದ್ದೇ ಪ್ರಾಬಲ್ಯ ಮೆರೆದು, ನಮ್ಮ ಭಾರತವನ್ನು ಕೆಳಗಿನ ಸ್ಥಾನದಲ್ಲಿ ನೋಡುತ್ತಿದ್ದಾಗ ಪ್ರತಿಯೊಬ್ಬ ಭಾರತೀಯನ ಮನಸ್ಸಿನಲ್ಲಿಯೂ ಥಟ್ ಅಂತಾ ಮೂಡಿ ಬರುವುದೇ ನಾವೂ ನಮ್ಮ ದೇಶದ ಪರಿಸ್ಥಿತಿ ಹೀಗೇಕೆ? ಎನ್ನುವ ನಿರಾಶೆ. ಅದೇ ಗುಂಗಿನಲ್ಲಿ ತಮ್ಮೆಲ್ಲಾ ಗೆಳೆಯರೊಡನೇ, ಸಾಮಾಜಿಕ ಜಾಲತಾಣಗಳಲ್ಲಿ ನಮ್ಮ ಅಸಹನೆಯನ್ನು ವ್ಯಕ್ತಪಡಿಸುವ ಜನರೇನು ಕಡಿಮೆ ಇಲ್ಲ. ಆದರೆ ಈಗಷ್ಟೇ ಸಂಪನ್ನಗೊಂಡ ಟೋಕಿಯೋ ಒಲಂಪಿಕ್ಸ್ ಕ್ರೀಡಾಕೂಟದಲ್ಲಿ ಭಾರತೀಯ ಕ್ರೀಡಾಳುಗಳ ಪ್ರದರ್ಶನವನ್ನು ಗಮನಿಸಿದರೆ ದೇಶದ ಕ್ರೀಡಾರಂಗ ಭರವಸೆಯ ಹಾದಿಯತ್ತ ಮುಖ ಮಾಡಿರುವ ಆಶಾಭಾವ ಮೂಡುತ್ತಿದೆ.

ಒಲಂಪಿಕ್ಸ್ ಪದಕಕ್ಕೆ ಒಂದು ವಿಶೇಷ ಸ್ಥಾನವಿದೆ. ಹಿಂದೆ 1996ರ ಒಲಂಪಿಕ್ಸ್‌ನಲ್ಲಿ ಕಂಚು ಗೆದ್ದ ಟೆನ್ನಿಸ್ ಪಟು ಲಿಯಾಂಡರ್ ಪೇಸ್ ಏಕೈಕ ಭಾರತೀಯ ಕ್ರೀಡಾಳುವಾದಾಗ, 2000 ಇಸವಿಯ ಸಿಡ್ನಿ ಒಲಂಪಿಕ್ಸ್‌ನಲ್ಲಿ ಕರ್ಣಂ ಮಲ್ಲೇಶ್ವರಿ ವೇಯ್ಟ್ ಲಿಫ್ಟಿಂಗ್‌ನಲ್ಲಿ ಕಂಚು ಗೆದ್ದಾಗ, 2008ರ ಬೀಜಿಂಗ್ ಒಲಂಪಿಕ್ಸ್‌ನಲ್ಲಿ ಶೂಟರ್ ಅಭಿನವ್ ಬಿಂದ್ರಾ ಚಿನ್ನದ ಪದಕವನ್ನೇ ಗೆದ್ದಾಗ ಇಡೀ ದೇಶ ಸಂಭ್ರಮಿಸಿತ್ತು. ಆದರೆ ಪ್ರತಿ ಒಲಂಪಿಕ್ಸ್‌ನಲ್ಲಿ ಪದಕಪಟ್ಟಿಯಲ್ಲಿ ಭಾರತ ಮೇಲೇರಿರಲಿಲ್ಲ. ಆದರೆ ಈ ಬಾರಿಯ ಟೋಕಿಯೋ ಒಲಂಪಿಕ್ಸ್ ಕ್ರೀಡಾಕೂಟದಲ್ಲಿ ಏಳು ಪದಕ ಗೆದ್ದ ಭಾರತ ತಂಡದ ಸಾಧನೆ ಇದುವರೆಗಿನ ಅತ್ಯುತ್ಕೃಷ್ಟ ದಾಖಲೆಯಾಗಿದೆ. ಹಾಗೆಯೇ ಪದಕ ಗೆಲ್ಲದಿದ್ದರೂ ಅನೇಕ ಕ್ರೀಡಾಪಟುಗಳ ಪ್ರದರ್ಶನ ಜನಮನ ಸೂರೆಗೊಂಡಿದೆ. ಉದಾಹರಣೆ ಇದುವರೆಗೂ ಯಾವ ಭಾರತೀಯ ಕ್ರೀಡಾಳುವೂ ಗಂಭೀರವಾಗಿ ಪರಿಗಣಿಸದ ಫೆನ್ಸಿಂಗ್ ಕ್ರೀಡೆಯಲ್ಲಿ ಅರ್ಹತೆ ಪಡೆದ ಭವಾನಿ ದೇವಿ ಪ್ರಶಸ್ತಿ ಗೆಲ್ಲಲು ತೀರ ಹತ್ತಿರಕ್ಕೆ ತಲುಪಿದರು. ಯಾರೂ ಊಹಿಸಲಾರದ ರೀತಿಯಲ್ಲಿ ಕರ್ನಾಟಕದವರೇ ಆದ ಗಾಲ್ಫ್ ಕ್ರೀಡಾಳು ಅದಿತಿ ಅಶೋಕ್ ಅತ್ಯುತ್ತಮ ಪ್ರದರ್ಶನ ನೀಡಿದರು. ಕುಸ್ತಿ, ಬಿಲ್ಗಾರಿಕೆ ಮೊದಲಾದ ಕ್ರೀಡೆಗಳಲ್ಲಿ ಭಾರತೀಯ ಕ್ರೀಡಾಳುಗಳು ಅತ್ಯುತ್ತಮ ಸ್ಪರ್ಧೆಯೊಡ್ಡಿದರು. ಇನ್ನೊಂದು ಸಂತಸದ ಬೆಳವಣಿಗೆ ಎಂದರೆ ಭಾರತದ ಹಾಕಿಯ ಪುನರುತ್ಥಾನ. ಹಿಂದೆ ಎಂಟು ಬಾರಿ ಚಿನ್ನದ ಪದಕ ಗೆದ್ದ ಭಾರತದ ಪುರುಷರ ತಂಡ 41 ವರ್ಷಗಳ ಬಳಿಕೆ ಒಲಂಪಿಕ್ಸ್ ಪದಕ ಗೆದ್ದರೆ, ನಾಲ್ಕನೇ ಸ್ಥಾನ ಪಡೆದ ಮಹಿಳಾ ತಂಡದ ಸಾಧನೆ ಎಲ್ಲರ ಮನಸೂರೆಗೊಂಡಿತು.



ಈ ಪ್ರಗತಿಗೆ ಕಾರಣ ಭಾರತದಲ್ಲಿ ಕ್ರೀಡೆಗಳ ಕುರಿತು ಧೋರಣೆಯಲ್ಲಿ ಆದ ಬದಲಾವಣೆ, ತರಬೇತಿಯಲ್ಲಿ ಬಂದ ಗಂಭೀರತೆ, ಸಿದ್ಧತೆಯಲ್ಲಿ ಭಾರತದ ಕ್ರೀಡಾಳುಗಳು ಹಾಕುತ್ತಿರುವ ಪರಿಶ್ರಮ. ಎಲ್ಲಕ್ಕೂ ಮಿಗಿಲಾಗಿ ಕ್ರಿಡಾಳುಗಳಿಗೆ ಸಿಗುತ್ತಿರುವ ಪ್ರೇರಣೆ–ಪ್ರೋತ್ಸಾಹ. ಜಿಮ್ನಾಸ್ಟಿಕ್ಸ್‌ನಲ್ಲಿ ಕಳೆದ ಒಲಿಂಪಿಕ್ಸ್‌ನಲ್ಲಿ ದೀಪ ಕರ್ಮಾರ್ಕರ್ 4ನೇ ಸ್ಥಾನ ಪಡೆದು ಪದಕವನ್ನು ಗೆಲ್ಲಲಿಲ್ಲವಾದರೂ, ಆಕೆಯ ಸಾಹಸ ಅನೇಕರಿಗೆ ಸ್ಫೂರ್ತಿ ನೀಡಲು ಸಹಕಾರಿಯಾಯಿತು ಎಂದರೆ ತಪ್ಪಲ್ಲ. ಇದರಿಂದಾಗಿಯೇ ಅಷ್ಟೇನೂ ಜನಪ್ರಿಯವಾಗಿಲ್ಲದಿದ್ದ ಕುಸ್ತಿ, ಬಿಲ್ಲುಗಾರಿಕೆ, ಅಥ್ಲೆಟಿಕ್ಸ್, ಜಿಮ್ನಾಸ್ಟಿಕ್ಸ್, ಶೂಟಿಂಗ್ ಮುಂತಾದ ಆಟಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾರತೀಯ ಕ್ರಿಡಾಪಟುಗಳು ತೊಡಗಿಸಿಕೊಳ್ಳಲು ಪ್ರೇರಣೆ ದೊರಕಿತು.

ಕರ್ಣಂ ಮಲ್ಲೇಶ್ವರಿ 2000ರ ಓಲಂಪಿಕ್ಸಿನಲ್ಲಿ ಕಂಚು ಪಡೆದಾಗ, ಆಕೆಯ ಸಂಪೂರ್ಣ ತರಬೇತಿ ಭಾರತದಲ್ಲಿ ಮತ್ತು ಭಾರತೀಯರ ತರಬೇತುದಾರರಿಂದ ದೊರಕಿತ್ತು. ಆದರೆ, 2021ರ ಟೋಕಿಯೋ ಓಲಂಪಿಕ್ಸಿನಲ್ಲಿ ಬೆಳ್ಳಿ ಪದಕವನ್ನು ಪಡೆದ ಮೀರಾಭಾಯಿ ಚಾನು ಅವರ ಸಾಮರ್ಥ್ಯವನ್ನು ಚಿಕ್ಕವಯಸ್ಸಿನಲ್ಲಿಯೇ ಗುರುತಿಸಿ ಆಕೆಗೆ ಅಂತರರಾಷ್ಟ್ರೀಯ ಮಟ್ಟದ ಉತ್ತಮ ತರಬೇತುದಾರರಿಂದ ಸೂಕ್ತವಾದ ತರಬೇತಿ ಕೊಡಿಸಿದ ಪರಿಣಾಮ ಪದಕ ಗೆಲ್ಲಲು ಸಹಕಾರಿಯಾಗಿತು. ಅದೇ ರೀತಿ ಪಂಜಾಬ್ ಪ್ರಾಂತ್ಯದ ಕುಸ್ತಿಪಟುಗಳಾದ ಫೋಗಟ್ ಸಹೋದರಿಯರು ಆರಂಭದಲ್ಲಿ ಅವರ ತಂದೆ ಮಹಾವೀರ್ ಸಿಂಗ್ ಫೋಗಟ್ ಅವರಿಂದ ತರಭೇತಿ ಪಡೆದರೂ ನಂತರ ದಿನಗಳಲ್ಲಿ ಅವರ ತರಭೇತಿಯನ್ನು ಕೇವಲ ಹರಿಯಾಣಕ್ಕೆ ಮಾತ್ರವೇ ಸೀಮಿತಗೊಳಿಸದೇ, ಕಳೆದ 2 ವರ್ಷಗಳಿಂದ ಅವರನ್ನು ವಿದೇಶಗಳಲ್ಲಿಯೂ ಉನ್ನತ ದರ್ಜೆಯ ಸೌಲಭ್ಯಗಳಲ್ಲಿ ತರಬೇತಿ ಕೊಡಿಸಿದ ಕಾರಣವೇ ಅವರ ಸಾಧನೆಯ ಮಟ್ಟ ಏರುತ್ತಿದೆ ಎಂದರೂ ತಪ್ಪಾಗಲಾರದು.

ಕ್ರೀಡಾ ಕ್ಷೇತ್ರಗಳಲ್ಲಿ ಭಾರತೀಯರ ಯಶಸ್ಸಿಗೆ ಭಾರತೀಯ ಸೈನ್ಯದ ಕೊಡುಗೆಯೂ ಹೆಚ್ಚಾಗಿಯೇ ಇದೆ. ಸದ್ಯದ ಭಾರತಿಯ ಪ್ರಮುಖ ಹಾಕಿ, ಶೂಟಿಂಗ್ ಬಾಕ್ಸಿಂಗ್, ಅಥ್ಲೆಟಿಕ್ಸ್ ಆಟಗಳಲ್ಲಿ ಅನೇಕ ಸೈನಿಕ ಕ್ರೀಡಾಳುಗಳು ಭಾಗವಹಿಸುತ್ತಿರುವುದು ನಿಜಕ್ಕೂ ಶ್ಲಾಘನೀಯವಾಗಿದೆ. ಸಾಮಾನ್ಯ ಸೈನಿಕನಾಗಿ 17ನೇ ವರ್ಷಕ್ಕೆ ಸೈನ್ಯದಲ್ಲಿ ಭರ್ತಿಯಾದ ಯುವಕ ನೀರಜ್ ಚೋಪ್ರಾ ಅವರಿಗೆ ಸೂಕ್ತವಾದ ತರಬೇತಿಯನ್ನು ಕೊಡಿಸಿದ ಕಾರಣದಿಂದಾಗಿಯೇ ಈ ಬಾರಿಯ ಓಲಂಪಿಕ್ಸ್‌ನಲ್ಲಿ ಭಾರತಕ್ಕೆ ಅಥ್ಲೆಟಿಕ್ಸಿನಲ್ಲಿ ಮೊದಲ ಬಾರಿಗೆ ಚಿನ್ನದ ಪದಕವನ್ನು ಗಳಿಸುವಂತಾಗಿದೆ. ಹಿಂದೆ ಸೈನ್ಯದ ಸೇವೆಯಲ್ಲಿದ್ದ ಇದ್ದ ರಾಜವರ್ಧನ್ ಸಿಂಗ್ ರಾಥೋಡ್ ಸಹಾ ಓಲಂಪಿಕ್ಸ್ ಶೂಟಿಂಗ್‌ನಲ್ಲಿ ರಜತ ಪದಕವನ್ನು ಗೆದ್ದು ನಂತರ ಕೇಂದ್ರ ಸರ್ಕಾರದಲ್ಲಿ ಕ್ರೀಡಾ ಸಚಿವರಾಗಿದ್ದರು.


ದೇಶದ ಕ್ರೀಡಾ ಕ್ಷೇತ್ರದ ಬೆಳವಣಿಗೆಗೆ ಸರ್ಕಾರಗಳ ಪಾತ್ರವೂ ಹಿರಿದು. ಕೇಂದ್ರ ಸರ್ಕಾರವೂ ಸೇರಿ ಪ್ರತಿ ರಾಜ್ಯದಲ್ಲಿಯೂ ಕ್ರೀಡಾ ಸಚಿವಾಲಯವಿದೆ, ಅದಕ್ಕಾಗಿ ಅನುದಾನವನ್ನೂ ಬಿಡುಗಡೆಗೊಳಿಸಲಾಗುತ್ತದೆ, ಸರ್ಕಾರದ ಅಧೀನದಲ್ಲಿ ಅನೇಕ ಕ್ರೀಡಾ ಸಂಸ್ಥೆಗಳೂ ಕಾರ್ಯ ನಿರ್ವಹಿಸುತ್ತವೆ. ಆದರೂ ಫಲಿತಾಂಶ ತೃಪ್ತಿಕರವಾಗಿಲ್ಲ ಎಂದರೆ ಅಲ್ಲಿ ಇಚ್ಛಾಶಕ್ತಿಯ ಕೊರತೆ ಎದ್ದು ಕಾಣುತ್ತದೆ. ಗೆದ್ದಾಗ ಒಂದಿಷ್ಟು ಬಹುಮಾನ ಘೋಷಿಸಿ ಕೈತೊಳೆದುಕೊಳ್ಳುವುದೇ ಪ್ರಮುಖ ಕೆಲಸ ಎಂದೆನಿಸಿಬಿಟ್ಟಿದೆ. ಆದರೆ ಈಚೆಗೆ ಕ್ರೀಡೆಯ ಕುರಿತು ಸರ್ಕಾರದ ಇಲಾಖೆಗಳ ವಿಶೇಷವಾಗಿ ಕೇಂದ್ರ ಸರ್ಕಾರದ ಧೋರಣೆ ಬದಲಾವಣೆಗೊಂಡಿದ್ದನ್ನು ಕಾಣಬಹುದು. ಭಾರತದ ಹಾಕಿ ತಂಡಕ್ಕೆ ಪ್ರಾಯೋಜಕರೇ ಇಲ್ಲದೇ

*2ನೇ ಪುಟಕ್ಕೆ...*

ಕ್ರೀಡೆ ಕೇವಲ ಮನರಂಜನೆಗಲ್ಲ. ಅದು ಗೆಲ್ಲಲೇಬೇಕೆನ್ನುವ ಪೈಪೋಟಿಯೂ ಅಲ್ಲ. ಇಂಗ್ಲೀಷ್ ಭಾಷೆಯಲ್ಲಿ ಸ್ಪೋರ್ಟ್ಸ್‌ಮನ್‌ಶಿಪ್, ಸ್ಪೋರ್ಟ್ಸ್‌ಮನ್ ಸ್ಪಿರಿಟ್–ಕ್ರೀಡಾ ಸ್ಫೂರ್ತಿ, ಕ್ರೀಡಾ ಪ್ರವೃತ್ತಿ ಎನ್ನುವ ನುಡಿಗಟ್ಟಿದೆ. ಉತ್ತಮ ವಿಜೇತನಾದಂತೆ ಉತ್ತಮ ಪರಾಜಿತನಾಗುವ ಗುಣವೂ ಇರಬೇಕು, ಸೋಲು ಮತ್ತು ಗೆಲುವು ಎರಡನ್ನೂ ವಿನಮ್ರನಾಗಿ ಸ್ವೀಕರಿಸಬೇಕು ಎನ್ನುವುದು ಅದರ ಅರ್ಥ. ಅಂದರ ಕ್ರೀಡೆ ಬಯಸುವುದು ಕ್ರೀಡಾ ಪ್ರವೃತ್ತಿಯನ್ನು. ಓರ್ವ ಕ್ರೀಡಾಳು ಉತ್ತಮ ಪ್ರದರ್ಶನ ನೀಡಬೇಕಿದ್ದರೆ ಆತನ ಶಾರೀರಿಕ ಪಟುತ್ವದ ಜೊತೆಗೆ ಮನ–ಬುದ್ಧಿಗಳ ಸಮತೋಲನವೂ ಅತ್ಯಗತ್ಯ. ಹಾಗಾಗಿ ಕ್ರೀಡೆ ಸ್ವಾಸ್ಥ್ಯದ ಸಂಕೇತ, ಶರೀರ–ಮನ–ಬುದ್ಧಿಗಳ ಆರೋಗ್ಯಪೂರ್ಣ ವಿಕಾಸ ಮಾರ್ಗ. ಹಾಗೆಯೇ ಯುದ್ಧಕ್ಷೇತ್ರದಲ್ಲಿ ಹೋರಾಟಕ್ಕಿಳಿದಿರುವ ಸೈನಿಕನ ಚಿತ್ತಸ್ಥಿತಿಯನ್ನು ಹೋಲಿಸಬಹುದಾದ ಇನ್ನೊಂದಿದ್ದರೆ ಅದು ಕ್ರೀಡಾಕಣದಲ್ಲಿ ನಿಂತಿರುವ ಕ್ರೀಡಾಪಟುವಿನ ಮನಃಸ್ಥಿತಿ. ಆದ್ದರಿಂದಲೇ ಕ್ರೀಡೆಗೆ ಮೈನವಿರೇಳಿಸುವ, ಕೌತುಕದ ತುದಿಗಾಲ ಮೇಲೆ ನಿಲ್ಲಿಸುವ ಗುಣವಿರುವುದು. ಇವೆಲ್ಲ ಕಾರಣಗಳಿಂದ ಆಟಗಳಿಗೆ ನಮ್ಮ ಜೀವನದಲ್ಲಿ ಒಂದು ಪ್ರಮುಖ ಸ್ಥಾನ ದೊರಕಿರುವುದು.

ಕ್ರೀಡೆಗಳಿಗೆ ಹಾಗೂ ಕ್ರೀಡಾಪಟುಗಳಿಗೆ ಇಂದು ವಿಶ್ವದಾದ್ಯಂತ ಒಂದು ಉನ್ನತ ಮನ್ನಣೆ ಇದೆ. ಕ್ರೀಡೆಯನ್ನು ತಮ್ಮ ಜೀವನದ ವೃತ್ತಿಮಾರ್ಗವಾಗಿ–ಕೆರಿಯರ್ ಆಗಿ ಆಯ್ದುಕೊಂಡು ಯಶಸ್ವಿಯಾದ ಸಾವಿರಾರು ಉದಾಹರಣೆಗಳನ್ನು ನಾವು ಭಾರತವನ್ನೂ ಸೇರಿದಂತೆ ವಿಶ್ವದಾದ್ಯಂತ ಕಾಣಬಹುದು. ಓರ್ವ ಯಶಸ್ವಿ ಕ್ರೀಡಾಳು (ಕೇವಲ ಪದಕ ಗೆದ್ದ ಆಧಾರದ ಮೇಲಲ್ಲ, ಆತನ/ಆಕೆಯ ಕ್ರೀಡಾ ಪ್ರವೃತ್ತಿಯನ್ನು ಆಧರಿಸಿ) ಲಕ್ಷಾಂತರ ಜನರಿಗೆ ಪ್ರೇರಣೆಯಾಗಿರುವ ನಿದರ್ಶನಗಳನ್ನು ನಾವು ಗಮನಿಸಬೇಕು. ಇಂದು ಕ್ರೀಡಾರಂಗ ಎಲ್ಲೆ ಮೀರಿದ ಅವಕಾಶಗಳನ್ನು ತೆರೆದಿಟ್ಟಿದೆ. ಆಟೋಟಗಳು ಕ್ರೀಡಾ ಪರಿಕರಗಳ ಉದ್ಯಮವೂ ಸಾಕಷ್ಟು ಬೆಳೆದಿದೆ. ಆದ್ದರಿಂದ ಕ್ರೀಡಾರಂಗವೂ ಕೂಡ ನಮ್ಮ ಆಯ್ಕೆಯ ಕೆರಿಯರ್ ಆಗಬಲ್ಲದು, ಕ್ರೀಡೆಯನ್ನು ವೃತ್ತಿಯಾಗಿ ಸ್ವೀಕರಿಸಬಹುದು ಎನ್ನವುದನ್ನು ಯುವಜನರು ಮನಗಾಣಬೇಕು. ನಮ್ಮ ಮಕ್ಕಳೂ ಕ್ರೀಡಾಳುಗಳಾಗಿ ಮನ್ನಣೆ ಗಳಿಸಬಲ್ಲರು ಎನ್ನುವುದನ್ನು ಪೋಷಕರೂ ಅರಿಬೇಕು.

# ಸಂಸ್ಮರಣೆ
## ಶ್ರೀ ಶ್ರೀಪಾದರಾಜರು



ಹರಿದಾಸ ಸಾಹಿತ್ಯ ಪ್ರವರ್ತಕರಾದ ಶ್ರೀಪಾದರಾಜರು ಕ್ರಿ.ಶ.1406ರಲ್ಲಿ, ಚನ್ನಪಟ್ಟಣದ ಬಳಿಯ ಅಬ್ಬೂರಿನಲ್ಲಿ ಹುಟ್ಟಿದವರು. ಲಕ್ಷ್ಮೀನಾರಾಯಣನೆಂಬ ಹುಟ್ಟು ಹೆಸರಿನ ಬಾಲಕ ಶ್ರೀರಂಗದಲ್ಲಿ ಪದ್ಮನಾಭತೀರ್ಥರ ಪೀಳಿಗೆಯ ಏಳನೆಯ ಮಠಾಧಿಪತಿಗಳಾದ ಶ್ರೀ ಸ್ವರ್ಣವರ್ಣತೀರ್ಥರಿಂದ ಸಂನ್ಯಾಸ ಸ್ವೀಕರಿಸಿ ಲಕ್ಷ್ಮೀನಾರಾಯಣ ತೀರ್ಥರಾದದ್ದು. ಶ್ರೀ ವಿಬುಧೇಂದ್ರ ತೀರ್ಥರ ಶಿಷ್ಯತ್ವವಹಿಸಿ ಉನ್ನತ ವಿದ್ಯಾಭ್ಯಾಸ ಪಡೆದು ವಿದ್ಯಾಪಾರಂಗತರಾಗಿ ಬಳಿಕ ಶ್ರೀ ರಘುನಾಥತೀರ್ಥರಿಂದ ವಿದ್ವತ್ಸಭೆಯಲ್ಲಿ ಮೆಚ್ಚುಗೆ ಗಳಿಸಿ 'ಶ್ರೀಪಾದರಾಜ'ರೆನಿಸಿಕೊಂಡರು.

ಶ್ರೀ ಶ್ರೀಪಾದರಾಜರು ಸುಮಾರು 14ನೇ ಶತಮಾನದಲ್ಲಿ ಅವತರಿಸಿದ್ದ ಮಹಾನುಭಾವರು. ಮಧ್ವಾಚಾರ್ಯರ ಮಾಧ್ವತತ್ವಗಳ ಪ್ರಸಾರದ ಉದ್ದೇಶದಿಂದ ಶ್ರೀ ಶ್ರೀಪಾದರಾಜರು 15ನೇ ಶತಮಾನದಲ್ಲಿ ಕೀರ್ತನೆ ಸುಳಾದಿ ಉಗಾಭೋಗ ವೃತ್ತನಾಮ, ದಂಡಕ ಇತ್ಯಾದಿ ಸಾಹಿತ್ಯ ಪ್ರಕಾರಗಳನ್ನು ಮೊತ್ತಮೊದಲಿಗೆ ಕನ್ನಡಭಾಷೆಯಲ್ಲಿ ತಂದ ಕೀರ್ತಿಗೆ ಭಾಜನರಾದರು. ಮತ್ತು ಹರಿದಾಸ ಸಾಹಿತ್ಯ ಪರಂಪರೆಗೇ ಮೊದಲಿಗರೆನ್ನಿಸಿಕೊಂಡರು. ದ್ವೈತಸಿದ್ಧಾಂತ, ಸಾಹಿತ್ಯ, ಸಂಗೀತ ಹಾಗೂ ಜೀವನ ಮೌಲ್ಯಗಳನ್ನು ಕನ್ನಡ ಭಾಷೆಯಲ್ಲಿ ಬಿತ್ತರಿಸಿದ ಕೀರ್ತಿ ಶ್ರೀ ಶ್ರೀಪಾದರಾಜರದು. ಇವರ ಶಿಷ್ಯರೇ ವಿಜಯನಗರದ ಸಾಮ್ರಾಜ್ಯದ ಅಧಿಪತಿಯಾಗಿದ್ದ ಕೃಷ್ಣದೇವರಾಯನ ರಾಜಗುರುಗಳಾಗಿದ್ದ ಶ್ರೀ ವ್ಯಾಸರಾಜರು.

ಸಂಸ್ಕೃತ ಭಾಷೆಯಲ್ಲಿ ಖಂಡನ-ಮಂಡನ ಗ್ರಂಥಗಳ ಮೂಲಕ ಮಾಧ್ವಮತ ತತ್ವ ಬೋಧನೆ ಮಾಡುತ್ತಿದ್ದ ವಿದ್ವಾಂಸರನ್ನು 'ವ್ಯಾಸಕೂಟ'ದವರೆಂದೂ ಅವೇ ಮತತತ್ವಗಳನ್ನು ಕನ್ನಡದಲ್ಲಿ ಕೀರ್ತನೆ ಸುಳಾದಿ ಉಗಾಭೋಗಾದಿ ಕೃತಿಗಳ ಮೂಲಕ ಪ್ರಸಾರ ಮಾಡುತ್ತಿದ್ದ ಪುರಂದರಾದಿ ಹರಿದಾಸರನ್ನು 'ದಾಸಕೂಟ'ದವರೆಂದೂ ಕರೆಯುವುದು ರೂಢಿ. ವ್ಯಾಸಕೂಟದವರ ದೃಷ್ಟಿ ತತ್ವ, ಪಾಂಡಿತ್ಯ, ವಾಕ್ಯಾರ್ಥ ಖಂಡನೆ-ಮಂಡನೆಗಳತ್ತ ಕೇಂದ್ರೀಕೃತವಾಗಿದ್ದರೆ ದಾಸ ಕೂಟದವರ ಗಮನ ಆತ್ಮಾವಲೋಕನ, ಆತ್ಮೋದ್ಧಾರ, ಲೋಕನೀತಿ, ಲೋಕೋದ್ಧಾರಗಳತ್ತ ಹೆಚ್ಚು ನೆಟ್ಟಿರುವುದನ್ನು ಕಾಣಬಹುದು. ಈ ಎರಡೂ ದೃಷ್ಟಿಗಳನ್ನು ಇರಿಸಿಕೊಂಡವರು ಶ್ರೀಪಾದರಾಜರು.

ಹರಿದಾಸ ಸಾಹಿತ್ಯಕ್ಕೆ ಮೂಲ ಶ್ರೀ ಮಧ್ವಾಚಾರ್ಯರ ದ್ವಾದಶಸ್ತೋತ್ರ. ಇದಾದ ಅನಂತರ ಶ್ರೀ ನರಹರಿತೀರ್ಥರು ಕನ್ನಡ ಭಾಷೆಯಲ್ಲಿ ಕೆಲವು ಕೀರ್ತನೆಗಳನ್ನು ರಚಿಸಿದ್ದಾರೆ. ಆದರೆ ಪೂರ್ಣಪ್ರಮಾಣದಲ್ಲಿ ಹರಿದಾಸ ಸಾಹಿತ್ಯ ರೂಪುಗೊಂಡದ್ದು ಶ್ರೀ ಶ್ರೀಪಾದರಾಜರಿಂದ. ಸಂಸ್ಕೃತದಲ್ಲಿ ಅವರು ರಚಿಸಿದ 'ವಾಗ್ವಜ್ರ' ಗ್ರಂಥವೊಂದರ ಉಲ್ಲೇಖದ ಹೊರತು ಮಿಕ್ಕೆಲ್ಲ ಅವರ ಕೃತಿಗಳು ಕನ್ನಡಲ್ಲೇ ಇವೆ. ಪರಮಾತ್ಮನನ್ನು ಅತಿಶಯ ಪ್ರೀತಿಯಿಂದ ಕರೆಯುವ 'ಬಾರೋ ಮನೆಗೆ ಗೋವಿಂದ', ಮನುಷ್ಯರಿಗೆ ಏನು ಭೂಷಣ? ಎಂದು ವರ್ಣಿಸುವ 'ಭೂಷಣಕೆ ಭೂಷಣ', 'ಕಂಗಳಿದ್ಯಾತಕೋ ಕಾವೇರಿ ರಂಗನ ನೋಡದ' ಮುಂತಾದ ಅವರ ಕೃತಿಗಳು ಸದಾ ಭಜನೆಗಳಲ್ಲಿ ಜನರ ನಾಲಿಗೆಯಲ್ಲಿ ನಲಿದೆ ಮನಸೆಳೆಯುತ್ತವೆ. ಜನರ ಆಡು ಭಾಷೆಗೆ ಪ್ರಾಶಸ್ತ್ಯವಿತ್ತ ಕೀರ್ತಿ ಶ್ರೀ ಶ್ರೀಪಾದರಾಜರದು. ಇಂದು ಕನ್ನಡ ಹರಿದಾಸ ಸಾಹಿತ್ಯದಲ್ಲಿ ಕಾಣಸಿಗುವ ಉಗಾಭೋಗ, ಸುಳಾದಿ, ವೃತ್ತನಾಮ, ದಂಡಕ ಈ ಎಲ್ಲ ಪ್ರಕಾರಗಳಲ್ಲೂ ಕೃತಿಗಳನ್ನು ರಚಿಸುವ ಮೂಲಕ ಹರಿದಾಸ ಸಾಹಿತ್ಯಕ್ಕೆ ಒಂದು ನಿರ್ದಿಷ್ಟ ಸ್ವರೂಪವನ್ನು ಕೊಟ್ಟವರು ಶ್ರೀ ಶ್ರೀಪಾದರಾಜರು. ಆ ಪರಂಪರೆಯನ್ನು ಸಶಕ್ತವಾಗಿ ಮುಂದುವರಿಸಿದ ಅವರ ಶಿಷ್ಯ ಶ್ರೀ ವ್ಯಾಸರಾಯರು ತಮ್ಮ ಶಿಷ್ಯರಾದ ಪುರಂದರ-ಕನಕಾದಿ ಹರಿದಾಸರ ಮೂಲಕ ಕನ್ನಡ ಹರಿದಾಸ ಸಾಹಿತ್ಯವನ್ನು ಇನ್ನಷ್ಟು ಮತ್ತಷ್ಟು ಬೆಳೆಸಿದರು.

ಶ್ರೀ ಶ್ರೀಪಾದರಾಜರು ಕೃಷ್ಣನ ಮೇಲೆ ಅನೇಕ ಕೃತಿಗಳನ್ನು ರಚಿಸುತ್ತಾ, ಭಾಗವತದ ದಶಮ ಸ್ಕಂದವನ್ನೇ ನಮ್ಮ ಮುಂದಿಟ್ಟಿದ್ದಾರೆ. ಕೃಷ್ಣ ಆಟವಾಡಿ ಮನೆಗೆ ಬಂದಾಗ 'ಎಲ್ಲಾಡಿ ಓಡಿ ಬಂದೆ ರಂಗಯ್ಯ', ಯಶೋದೆ ಕೃಷ್ಣನನ್ನು ಹುಡುಕಿ ಹುಡುಕಿ ಬಳಲಿ, ಕೊನೆಗೆ ಅವನನ್ನು ಕಂಡಾಗ 'ಅಷ್ಟ ದಿಕ್ಕಿನಲ್ಲರಸಿ ಕಾಣದೇ, ಬಲು ಕಷ್ಟಪಟ್ಟೆನೋ ನಿನ್ನ ನೋಡದೇ' ಎಂದು ಪರಿತಪಿಸುವ ಪರಿಯನ್ನು ವರ್ಣಿಸಿದ್ದಾರೆ. ಈ ಕೃತಿಯಲ್ಲಿ ಪರಮಾತ್ಮನ ಸರ್ವೋತ್ತಮತ್ವವನ್ನೂ ಸಾರಿದ್ದಾರೆ. ಗೋಪಿಕಾ ಸ್ತ್ರೀಯರು ಕೃಷ್ಣನನ್ನು 'ಪೋಪು ಹೋಗೋಣ ಬಾರೋ ರಂಗ' ಎಂದು ಕರೆಯುವ ಶೈಲಿಯೂ ಬಲು ಸುಂದರ. ಶ್ರೀ ಶ್ರೀಪಾದರಾಜರ ಕೃತಿ 'ಕಾಡ ಬೆಳದಿಂಗಳು ಈ ಸಂಸಾರ ಕತ್ತಲೆ ಬೆಳದಿಂಗಳು' ನೈಜ ವಿರಕ್ತಿ ಸ್ಫುರಿಸುವಂತದ್ದು.

ಶ್ರೀ ಶ್ರೀಪಾದರಾಜರು ಹಾಡುಗಳಲ್ಲದೇ ಭಾಗವತದ 'ಭ್ರಮರಗೀತೆ'ಯನ್ನು ಸರಳಸುಂದರವಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಇವರ ನರಸಿಂಹ ದಂಡುಕ, ಹಳೆಗನ್ನಡದಲ್ಲಿದ್ದು ಪಂಪ-ರನ್ನರ ಕೃತಿಗಳನ್ನು ನೆನಪಿಸುತ್ತದೆ. ಇವರು ತಮ್ಮ 'ಇಟ್ಟಾಗೆ ಇರುವೆನೋ ಹರಿಯೇ ಎನ್ನ ದೊರೆಯೇ' ಕೃತಿಯಲ್ಲಿ ಜೀವನ ಅಸ್ವಾತಂತ್ರ್ಯವನ್ನು, ಪರಮಾತ್ಮನ ಸ್ವಾತಂತ್ರ್ಯವನ್ನು ಬಹಳ ಸುಂದರವಾಗಿ, ಅನುಭವದ ನುಡಿಗಳಿಂದ ಪ್ರತಿಪಾದಿಸಿದ್ದಾರೆ. ಶ್ರೀಪಾದರಾಜರು ಹರಿದಾಸ ಸಾಹಿತ್ಯವನ್ನು ಶ್ರೀಮಂತಗೊಳಿಸಿ, ಭಕ್ತಿಯ ಮಹತ್ವವನ್ನು ಜಗದಲ್ಲಿ ಸಾರಿ ಶಾಲಿವಾಹನ ಶಕೆ 1416 ಜೇಷ್ಠ ಶುದ್ಧ ಚತುರ್ದಶಿ ದಿನದಂದು ಸಜೀವವಾಗಿ ವೃಂದಾವನವನ್ನು ಪ್ರವೇಶಿಸಿದರು.

*1ನೇ ಪುಟದಿಂದ...*

ಸಂಕಷ್ಟ ಉಂಟಾದಾಗ 2018ರಲ್ಲಿ ಒಡಿಶಾ ಸರ್ಕಾರ ಪ್ರಾಯೋಕತ್ವ ವಹಿಸಿಕೊಂಡಿತು, ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಸ್ವಯಂ ಮುತುವರ್ಜಿ ವಹಿಸಿದರು.

ಗುಜರಾತ್ ಸರ್ಕಾರ ಖೇಲ್ ಮಹಾಕುಂಭ್‌ದಂತಹ ಕಾರ್ಯಕ್ರಮ ರೂಪಿಸಿ ಕ್ರೀಡೆಯಲ್ಲಿ ಆಸಕ್ತಿ ಮೂಡಿಸುವ ಕೆಲಸ ಮಾಡಿತು. ಕೇಂದ್ರ ಸರ್ಕಾರದ ಕ್ರೀಡಾ ಇಲಾಖೆ ನಡೆಸುವ ವಾರ್ಷಿಕ ಖೇಲೋ ಇಂಡಿಯಾ ಕ್ರೀಡಾಕೂಟ ಅಭಿಯಾನಗಳು ದೇಶದ ಯುವಕರು ಆಟಗಳತ್ತ ಮುಖಮಾಡಲು ಪ್ರೇರೇಪಿಸಿತು.

ಹಾಗೆಯೇ ಗ್ರಾಮೀಣ ಪ್ರತಿಭೆಗಳನ್ನು ಗುರುತಿಸಿ ಅವರಿಗೆ ಸೂಕ್ತ ತರಭೇತಿಯನ್ನು ನೀಡುವುದರ ಜೊತೆಗೆ ಅವರಿಗೆ ಆರ್ಥಿಕ ಭಧತೆಯನ್ನು ಒದಗಿಸುವ, ಸರ್ಕಾರಿ ಕೆಲಸಗಳನ್ನು ಕೊಡಿಸುವ ಸರ್ಕಾರಗಳ ಕ್ರಮಗಳಿಂದ ಅನೇಕ ಪ್ರತಿಭೆಗಳು ಹೊರಹೊಮ್ಮಲು ಸಾಧ್ಯವಾಗಿದೆ. ಇಂತಹ ಸದುಪಯೋಗವನ್ನು ಅದರಲ್ಲೂ ಈಶಾನ್ಯ ಭಾರತದ ಮತ್ತು ಪಂಜಾಬ್ ಪ್ರಾಂತ್ಯದ ಕ್ರೀಡಾಪಟುಗಳು ಹೆಚ್ಚಿನ ರೀತಿಯಲ್ಲಿ ಬಳಸಿಕೊಂಡು ಕ್ರೀಡೆಗಳಲ್ಲಿ ಉನ್ನತ ಮಟ್ಟಕ್ಕೇರುತ್ತಿರುವುದು ನಿಜಕ್ಕೂ ಭಾರತಕ್ಕೆ ಆಶಾಕಿರಣವಾಗಿದೆ.


ಒಲಂಪಿಕ್ಸ್ ಕ್ರೀಡಾಕೂಟ ಕ್ರೀಡಾಳುಗಳ ತರಬೇತಿ, ಅವರ ಅವಶ್ಯಕತೆಗಳನ್ನು ಪೋರೈಸಲು ಕೇಂದ್ರ ಕ್ರೀಡಾ ಸಚಿವಾಲಯ ಖುದ್ದು ಆಸ್ಥೆ ವಹಿಸಿದುದರ ಜೊತೆಗೆ ಪ್ರಧಾನಮಂತ್ರಿಗಳೇ ಆಸಕ್ತಿ ವಹಿಸಿ ಗಮನಿಸಿದರು. ಅವರು ಕ್ರೀಡಾಳುಗಳನ್ನು ಪ್ರದರ್ಶನಕ್ಕೆ ಮೊದಲು, ನಂತರ ಸ್ವಯಂ ಮಾತನಾಡಿಸಿ ಹುರಿದುಂಬಿಸುವ ಪರಿ, ಪ್ರತಿಯೊಬ್ಬ ಕ್ರೀಡಾಪಟುವಿನ ಹೆಸರು ಹೇಳಿ ವಿಚಾರಿಸುವ ಮಟ್ಟಿಗಿನ ಆಸಕ್ತಿ ಕ್ರೀಡಾಳುಗಳ ಹುಮ್ಮಸ್ಸನ್ನು ದ್ವಿಗುಣಗೊಳಿಸಿತು. ಮೊದಲೆಲ್ಲ ಒಲಂಪಿಕ್ಸ್ ಸಮಯದಲ್ಲಿ ಭಾರತದ ಕ್ರೀಡಾಮಂತ್ರಿ, ಒಲಂಪಿಕ್ಸ್ ಸಮಿತಿಯ ಅಧ್ಯಕ್ಷ, ಅಧಿಕಾರಿಗಳು ಅತಿಥಿಗಳಂತೆ ಕ್ರೀಡಾಗ್ರಾಮಕ್ಕೆ ಬಂದು ಹೋಗುತ್ತಿದ್ದರು. ಆದರೆ ಈ ಬಾರಿ ಸ್ವಯಂ ಕ್ರೀಡಾ ಮಂತ್ರಿಗಳೇ ಠಿಕಾಣಿ ಹೂಡಿ ಜೊತೆಯಾಗಿದ್ದುದು ಸರ್ಕಾರ ಕ್ರೀಡೆಯನ್ನು ಎಷ್ಟು ಗಂಭೀರವಾಗಿ ಪರಿಗಣಿಸುತ್ತದೆ ಎನ್ನುವ ಸಂದೇಶವನ್ನು ನೀಡಿತು. ಹಾಗೆಯೇ ಒಲಂಪಿಕ್ಸ್‌ನಲ್ಲಿ ಪಾಲ್ಗೊಂಡ ಎಲ್ಲ ಕ್ರೀಡಾಳುಗಳು, ತರಬೇತುದಾರರು, ಸಹಾಯಕರನ್ನೆಲ್ಲ ಆಹ್ವಾನಿಸಿ ಪ್ರತಿಯೊಬ್ಬರನ್ನೂ ಗೌರವಿಸಿದ ಪರಿ ಅವಿಸ್ಮರಣೀಯ ಪ್ರೇರಣೆ ಎಂದು ಸ್ವಯಂ ಕ್ರೀಡಾಪಟುಗಳೇ ಅಭಿಪ್ರಾಯ ವ್ಯಕ್ತಪಡಿಸಿದರು. ಇದನ್ನು ದೇಶದ ಕ್ರೀಡಾ ದಿಗ್ಗಜರಾದ ಕಪಿಲ್ ದೇವ್, ಅಂಜು ಬಾಬಿ ಜಾರ್ಜ್ ಮೊದಲಾದವರೆಲ್ಲ ಶ್ಲಾಘಿಸಿದರು.

ಒಟ್ಟಿನಲ್ಲಿ ಭಾರತದ ಕ್ರೀಡಾರಂಗ ಭರವಸೆಯ ಪಥದಲ್ಲಿ ಸಾಗುತ್ತಿರುವುದು ಸಂತಸದ ಸಂಗತಿಯಾಗಿದೆ. ನಮ್ಮಲ್ಲಿ ಪ್ರತಿಭೆಗಳಿಗೇನೂ ಕೊರತೆಯಿಲ್ಲ. ಪ್ರತಿಭೆ ಪ್ರಕಾಶಗೊಳ್ಳಬೇಕಿದೆ, ಪ್ರತಿಭೆಗೆ ನೀರೆರೆಯಬೇಕಿದೆ. ಸರ್ವರ ಸಾಮೂಹಿಕ ಪ್ರಯತ್ನ, ಕ್ರೀಡಾ ಪ್ರತಿಭೆಗಳ ಪರಿಶ್ರಮದಿಂದ ಮುಂದಿನ ದಿನಗಳಲ್ಲಿ ಭಾರತದ ರಾಷ್ಟ್ರಗಾನ ವಿಶ್ವದ ಕ್ರೀಡಾಂಗಣದಲ್ಲಿ ಮೊಳಗಲಿ. ಭಾರತ ಕ್ರೀಡಾ ರಾಷ್ಟ್ರವಾಗಿ ಹೊರಹೊಮ್ಮಲಿ.

---

ಲೇಖಕರು: **ಶ್ರೀಕಂಠ ಬಾಲಗಂಚಿ,** ಅಭಾಸಾಪ ಬೆಂ. ಗ್ರಾಮಾಂತರ ಜಿಲ್ಲಾ ಸಂಯೋಜಕರು

## ಪುಸ್ತಕ ಪರಿಚಯ




ಪುಸ್ತಕದ ಹೆಸರು: **ಮರೆಯಬಾರದ ಇತಿಹಾಸಾಧ್ಯಾಯಗಳು**
ಲೇಖಕರು: **ನಾಡೋಜ ಡಾ.ಎಸ್ ಆರ್ ರಾಮಸ್ವಾಮಿ**
ಪ್ರಕಾಶಕರು: **ರಾಷ್ಟ್ರೋತ್ಥಾನ ಸಾಹಿತ್ಯ**
ಬೆಲೆ: **ರೂ. 100**

ಇತಿಹಾಸ ವ್ಯಾಸಂಗದಿಂದ ಪ್ರಯೋಜನವಾಗಬೇಕಾದರೆ ರಾಜಕೀಯ ಸ್ಥಿತ್ಯಂತರಗಳ ಕಥನವಷ್ಟೇ ಸಾಕಾಗುವುದಿಲ್ಲ. ಆ ಘಟನಾವಳಿಗಳ ವಿಸ್ತತ ಹಿನ್ನೆಲೆಯ ಮತ್ತು ಜನಸಮುದಾಯಗಳ ಮೇಲೆ ಅವುಗಳ ಪರಿಣಾಮಸರಣಿಗಳ ಅರಿವೂ ಅವಶ್ಯವಾಗುತ್ತದೆ. ರಾಜಕೀಯಪ್ರಧಾನ ಕಥನದೊಡನೆ ಅಲ್ಪಪರಿಚಿತ ಆಯಾಮಗಳನ್ನೂ ಪರಿಚಯಿಸುವ ಆಶಯವನ್ನು ಈ ಗ್ರಂಥದೊಳಗಿನ ಪ್ರಬಂಧಗಳಲ್ಲಿ ಕಾಣಬಹುದು. ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಕ್ರೈಸ್ತಮತ ವಿಸ್ತಾರಕರಿಂದ ಜಗತ್ತಿನಲ್ಲಿ ನಡೆದ ಕ್ರೌರ್ಯಸರಣಿಗಳು, ಹದಿನೆಂಟನೇ ಶತಮಾನದ ಸಂನ್ಯಾಸಿ ಆಂದೋಲನ, ಇಪ್ಪತ್ತನೇ ಶತಮಾನದ ಆರಂಭಕಾಲದ ಕೋಮಗಾತ ಮರು ದುರಂತ, ಇಪ್ಪತ್ತನೇ ಶತಮಾನದ ಆರಂಭದಶಕಗಳಲ್ಲಿ ವೈಚಾರಿಕ ಕ್ಷೇತ್ರದಲ್ಲಿ ನಡೆದ ಸ್ವಾತಂತ್ರ್ಯಾಭಿಮುಖ ಪ್ರಯಾಸಗಳು, ಎರಡು ಮಹಾಯುದ್ಧಗಳು ಹೀಗೆ ಐತಿಹಾಸಿಕ ಮೈಲಿಗಲ್ಲುಗಳೆನಿಸಿರುವ ಹಲವು ಇತಿಹಾಸಖಂಡಗಳನ್ನು ಕುರಿತ ವಿಶ್ಲೇಷಣಾತ್ಮಕ ಪ್ರಬಂಧಗಳು ಈ ಗ್ರಂಥದಲ್ಲಿ ಸಂಕಲನಗೊಂಡಿವೆ.

**ರಾಷ್ಟ್ರೀಯ ವಿಚಾರಗಳ ಗ್ರಂಥಗಳಿಗಾಗಿ ಭೇಟಿ ನೀಡಿ: www.sahityabooks.com**



ಆತ್ಮಶೋಧನೆಯಲ್ಲಿ ತೊಡಗಲು ಪ್ರೇರಣೆ ನೀಡಬಲ್ಲವನೇ ನಿಜವಾದ ಶಿಕ್ಷಕ

*–ಡಾ. ಸರ್ವಪಲ್ಲಿ ರಾಧಾಕೃಷ್ಣನ್*

## ಎಲ್ಲೋ ಕೇಳಿದ ಕಥೆ

ಒಮ್ಮೆ ನಾರದ ಮುನಿಗೆ ತನ್ನಂತಹ ಭಕ್ತ ಯಾರೂ ಇಲ್ಲ ಎನ್ನುವ ಅಹಂಕಾರ ಬಂತು. ಇದನ್ನು ಅರಿತ ಶ್ರೀಹರಿ "ನಾರದರೇ, ಭೂಲೋಕ ದೂರದ ಹಳ್ಳಿಯಲ್ಲಿ ಓರ್ವ ರೈತನಿದ್ದಾನೆ, ಅವನೇ ನನ್ನ ಮಹಾಭಕ್ತ" ಎಂದಾಗ ನಾರದರಿಗೆ ನಿರಾಶೆಯಾಯಿತು. ಆಗಲಿ ಪರೀಕ್ಷೆ ಮಾಡಿಬೊಡೋಣ ಎಂದು ಆತನಲ್ಲಿ ಹೋದರು. ಆ ರೈತ ಬೆಳಿಗ್ಗೆ ಎದ್ದು ಹರಿನಾಮವನ್ನು ಒಮ್ಮೆ ಉಚ್ಚರಿಸಿ ತನ್ನ ಹೊಲಕ್ಕೆ ಬೇಸಾಯದ ಕೆಲಸಕ್ಕೆ ಹೊರಡುತ್ತಿದ್ದ. ದಿನವೆಲ್ಲ ಕೆಲಸದಲ್ಲಿ ನಿರತನಾಗುತ್ತಿದ್ದ. ರಾತ್ರಿ ಇನ್ನೊಮ್ಮೆ ಹರಿನಾಮವನ್ನುಚ್ಚರಿಸಿ ಮಲಗುತ್ತಿದ್ದ. ನಾರದರಿಗೆ ಆಶ್ಚರ್ಯವಾಯಿತು ಹಾಗೆಯೇ ಶ್ರೀಹರಿಯ ಮೇಲೆ ಅಸಾಧ್ಯ ಕೋಪವೂ ಬಂದಿತು 'ಯಾವಾಗಲೂ ಹರಿನಾಮಸ್ಮರಣೆಯನ್ನು ಮಾಡುವ ನನ್ನನ್ನು ಬಿಟ್ಟು, ಎಂದೂ ಹರಿಪೂಜೆ ಮಾಡದ, ನಾಮಸ್ಮರಣೆ ಮಾಡದೇ ದಿನವಿಡೀ ದುಡಿಮೆಯಲ್ಲಿ ನಿರತನಾಗಿರುವ ಈತ ಹೇಗೆ ಹರಿಯ ಮಹಾಭಕ್ತನಾದಾನು?'

ನಾರದರ ಸಂದೇಹ ಪರಿಹಾರಕ್ಕಾಗಿ ಉಪಾಯ ಸೂಚಿಸಿದ ಶ್ರೀಹರಿ ಒಂದು ಬಟ್ಟಲಿನಲ್ಲಿ ತುಂಬ ಹಾಲನ್ನು ತುಂಬಿ, "ಇದನ್ನು ಹಿಡಿದು ಒಮ್ಮೆ ನಮ್ಮ ವೈಕುಂಟವನ್ನು ಸುತ್ತು ಹಾಕಿ ನಾರದರೇ, ಆದರೆ ನೆನಪಿರಲಿ, ಒಂದು ತೊಟ್ಟು ಹಾಲೂ ಸಹ ಕೆಳಗೆ ಬೀಳಬಾರದು" ಎಂದು ಸೂಚಿಸಿದ. ಹಾಗೆಯೇ ಸುತ್ತು ಹಾಕಿ ತಿರುಗಿ ಬಂದ ನಾರದರನ್ನು ಶ್ರೀಹರಿ ಕೇಳಿದ "ನಾರದರೇ, ಈ ನಡುವೆ ಎಷ್ಟು ಬಾರಿ ನನ್ನ ನಾಮಸ್ಮರಣೆ ಮಾಡಿದಿರಿ?" ನಾರದರಿಗೆ ಈಗ ಕಣ್ತೆರೆಯಿತು. ಅಹಂಕಾರ ಇಳಿಯಿತು. ಹಾಲು ಚೆಲ್ಲಬಾರದು ಎನ್ನುವುದರಲ್ಲಿ ಗಮವಿರಿಸುವ ಭರದಲ್ಲಿ ಹರಿನಾಮಸ್ಮರಣೆಯನ್ನೇ ಮರೆತಿದ್ದರು ನಾರದ ಮುನಿ. ಆದರೆ ಸದಾ ಸಂಸಾರ ನಡೆಸುವ ಬೇಸಾಯದ ಕಾರ್ಯಭಾರಗಳಲ್ಲೇ ಸಂಪೂರ್ಣ ತೊಡಗಿರುವ ಆ ರೈತ ದಿನದಲ್ಲಿ ಎರಡು ಬಾರಿಯಾದರೂ ಶ್ರೀಹರಿಯ ನಾಮಸ್ಮರಣೆಯನ್ನು ಮಾಡುವುದನ್ನು ಮಾತ್ರ ತಪ್ಪಿಸುತ್ತಿರಲಿಲ್ಲ. ಕರ್ಮದಲ್ಲೇ ಆತ ಶ್ರೀಹರಿಯನ್ನು ಕಾಣುತ್ತಿದ್ದ.

ಸಂಪಾದಕೀಯ ಸಹಕಾರ: ಶೈಲೇಶ್ ಕುಲಕರ್ಣಿ, ಸುನೀಲ್ ಕುಲಕರ್ಣಿ, ರಾಧಾಕೃಷ್ಣ ಹೊಳ್ಳ, ಸತ್ಯನಾರಾಯಣ ಶಾನಭಾಗ

ಆಧಾರ್ ಯೋಜನೆಯ ಸಮರ್ಥ ಬಳಕೆಯಿಂದ ದೇಶದ ಖಜಾನೆಗೆ 1.8 ಲಕ್ಷ ಕೋಟಿ ರೂಪಾಯಿಗಳಷ್ಟು ಬೃಹತ್ ಮೊತ್ತ ಉಳಿತಾಯವಾಗಿದೆ. ಈ ವಿಷಯ ತಿಳಿಸಿದ ಆಧಾರ್ ಜಾರಿಯ ಹೊಣೆ ಹೊತ್ತಿರುವ ಯುನಿಕ್ ಐಡೆಂಟಿಟಿ ಆಥಾರಿಟಿ ಆಫ್ ಇಂಡಿಯಾದ ಮುಖ್ಯ ನಿರ್ವಹಣಾಧಿಕಾರಿ ಡಾ ಸೌರಭ್ ಗರ್ಗ್, ಜನ್‌ಧನ್–ಆಧಾರ್–ಮೊಬೈಲ್ ಸಂಯೋಜನೆ ಹಾಗೂ ಫಲಾನುಭವಿಗಳ ಖಾತೆಗೆ ನೇರ ನಗದು ವರ್ಗಾವಣೆಯ ಜಾರಿ ಪಾರದರ್ಶಕತೆ ಮತ್ತು ಸೌಲಭ್ಯಗಳ ಉದ್ದೇಶಿತ ವಿತರಣೆಯಲ್ಲಿ ಕ್ರಾಂತಿಯನ್ನೇ ಮಾಡಿದೆ ಎಂದು ತಿಳಿಸಿದ್ದಾರೆ. ಆಧಾರ್ ಸಂಯೋಜಿತ ಬ್ಯಾಂಕ್ ಖಾತೆಗೆ ನೇರ ನಗದು ವರ್ಗಾವಣೆಯಿಂದ ಸೋರಿಕೆ ಬಹುದೊಡ್ಡ ಪ್ರಮಾಣದಲ್ಲಿ ತಗ್ಗಿದೆ, ಇದು 2016ರಲ್ಲಿ ಜಾರಿಗೆ ಬಂದ ಆಧಾರ್ ಕಾನೂನಿನಿಂದ ಸಾಧ್ಯವಾಗಿದೆ. ಆಧಾರ್ ಯೋಜನೆ 2009ರಲ್ಲಿಯೇ ಆರಂಭವಾದರೂ ಅದರ ಪ್ರಯೋಜನದಲ್ಲಿ ಸ್ಪಷ್ಟತೆ ಕೊರತೆ ಹಾಗೂ ಜಾರಿಯಲ್ಲಿನ ಗೊಂದಲಗಳಿಂದ ಪ್ರಯೋಜನಕ್ಕೆ ಬಾರದಂತಾಗಿತ್ತು ಎನ್ನುವುದು ಗಮನಿಸಬೇಕಾದ ಅಂಶ.



ಪೋಲೆಂಡ್ ದೇಶದ ವಾರ್ಸಾ ವಿಶ್ವವಿದ್ಯಾಲಯದ ಗ್ರಂಥಾಲಯದ ಗೋಡೆಗಳ ಮೇಲೆ ಉಪನಿಷತ್ತು ಬರಹಗಳನ್ನು ಕೆತ್ತನೆ ಮಾಡಲಾಗಿದೆ. ಅದರ ಚಿತ್ರಗಳನ್ನು ಪೋಲೆಂಡ್‌ನ ಭಾರತೀಯ ರಾಯಭಾರ ಕಚೇರಿ ತನ್ನ ಅಧಿಕೃತ ಟ್ವಿಟ್ಟರ್ ಖಾತೆಯಲ್ಲಿ ಹಂಚಿಕೊಂಡಿದ್ದು, ಇದು ಭಾರತೀಯರ ಮನಸ್ಸು ಆಹ್ಲಾದಗೊಳಿಸುವ ದೃಶ್ಯ ಎಂದು ಹೇಳಿದೆ. ವಾರ್ಸಾ ವಿಶ್ವವಿದ್ಯಾಯದ ಗ್ರಂಥಾಲಯದ ಗೋಡೆಗಳಲ್ಲಿ ಉಪನಿಷತ್ ಬರಹಗಳನ್ನು ಕೆತ್ತಲಾಗಿದೆ. 'ಈ ದೃಶ್ಯಗಳು ಹಿಂದೂ ಧರ್ಮದ ಸಂಸ್ಕೃತಿಯನ್ನು ರೂಪಿಸುವ ಹಿಂದೂ ತತ್ವಶಾಸ್ತ್ರದ ವೈದಿಕ ಸಂಸ್ಕೃತದ ಪಠ್ಯಗಳಾಗಿವೆ' ಎಂದು ಈ ಚಿತ್ರಕ್ಕೆ ತಲೆಬರಹ ನೀಡಲಾಗಿದೆ. ವಿಶ್ವವಿದ್ಯಾಲಯದ ಕಾರ್ಯಕ್ಕೆ ಅನೇಕ ಭಾರತೀಯರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಉಡುಪಿ ಜಿಲ್ಲೆಯ ಕುಂದಾಪುರದ ಆಲ್ಬಾಡಿ–ಆರ್ಡಿ ಗ್ರಾಮದ ಚಾರ್ಮಕ್ಕಿ ನಾರಾಯಣ ಶೆಟ್ಟಿ ಸ್ಮಾರಕ ಸರ್ಕಾರಿ ಪ್ರೌಢಶಾಲೆಯ ಈರ್ವರು ವಿದ್ಯಾರ್ಥಿನಿಯರು ಸಿದ್ಧಪಡಿಸಿದ 'ಗ್ಯಾಸ್ ಸೇವಿಂಗ್ ಕಿಟ್' ರಾಷ್ಟ್ರಮಟ್ಟದ ನಾವೀನ್ಯತಾ ಪ್ರಶಸ್ತಿಗೆ ಭಾಜನವಾಗಿದೆ. 10ನೇ ತರಗತಿಯ ವಿದ್ಯಾರ್ಥಿಗಳಾದ ಅನುಷಾ ಹಾಗೂ ರಕ್ಷಿತಾ ನಾಯ್ಕ ಅವರು ವಿನ್ಯಾಸಗೊಳಿಸಿರುವ ಈ ಅಡುಗೆ ಅನಿಲ ಉಳಿತಾಯ ಸಾಧನಕ್ಕೆ ಕೇವಲ 600 ರೂ ವೆಚ್ಚ ತಗಲುತ್ತದೆ. ಇದನ್ನು ಅಳವಡಿಸಿದರೆ ಅಡುಗೆ ಆಗುತ್ತಿರುವಾಗಲೇ ಸಾಕಷ್ಟು ನೀರನ್ನು ಬಿಸಿ ಮಾಡಿಕೊಳ್ಳಬಹುದಾಗಿದ್ದು ದೇಶದಾದ್ಯಂತ ಮನೆಗಳು, ಹೋಟೆಲ್‌ಗಳಲ್ಲಿ ಬಳಸಿದರೆ ದೊಡ್ಡ ಪ್ರಮಾಣದಲ್ಲಿ ಗ್ಯಾಸ್ ಉಳಿತಾಯ ಮಾಡಬಹುದು. ಕೇಂದ್ರದ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ ಆಯೋಜಿಸಿದ ಇನೊವೇಶನ್ ಅವಾರ್ಡ್ ಫಾರ್ ಸ್ಕೂಲ್ ಚಿಲ್ಡ್ರನ್–2021 ಸ್ಪರ್ಧೆಗೆ ಆಯ್ಕೆಯಾದ ದೇಶದ 14 ಶಾಲೆಗಳ ಪೈಕಿ ಆಲ್ಬಾರ್ಡಿಯ ಸರ್ಕಾರಿ ಪ್ರೌಢಶಾಲೆಯು ಕರ್ನಾಟದಿಂದ ಆಯ್ಕೆಯಾದ ಏಕೈಕ ಶಾಲೆಯಾಗಿದೆ.





ರಾಷ್ಟ್ರೀಯ ರಕ್ಷಣಾ ಅಕಾಡೆಮಿ (ಎನ್‌ಡಿಎ) ನಡೆಸಲಿರುವ ಪರೀಕ್ಷೆಯಲ್ಲಿ ಭಾಗವಹಿಸಲು ಅರ್ಹ ಮಹಿಳೆಯರಿಗೂ ಅವಕಾಶ ನೀಡಬೇಕು ಎಂದು ಸುಪ್ರೀಂಕೋರ್ಟ್ ಮಹತ್ವದ ನಿರ್ಧಾರ ಪ್ರಕಟಿಸಿದೆ. ಭದ್ರತಾ ಪಡೆಗಳಲ್ಲಿ ಲಿಂಗ ಸಮಾನತೆಯನ್ನು ಸಾಧಿಸುವ ನಿಟ್ಟಿನಲ್ಲಿ ಇದೊಂದು ಮಹತ್ವದ ಹೆಜ್ಜೆಯಾಗಿದೆ. ರಕ್ಷಣಾ ಅಕಾಡೆಮಿ, ನೌಕಾ ಅಕಾಡೆಮಿಯ ಪರೀಕ್ಷೆಗಳಿಗೂ ಮಹಿಳಾ ಅಭ್ಯರ್ಥಿಗಳು ಹಾಜರಾಗಬಹುದು, ಎನ್‌ಡಿಎ ತರಬೇತಿಗೂ ಅವರಿಗೆ ಅವಕಾಶ ಇದೆ. ಇದಕ್ಕೆ ಪೂರಕವಾದ ಆದೇಶವನ್ನು ಹೊರಡಿಸುವಂತೆಯೂ ಸುಪ್ರೀಂಕೋರ್ಟ್ ಕೇಂದ್ರ ಲೋಕಸೇವಾ ಆಯೋಗಕ್ಕೆ ಸೂಚಿಸಿದೆ. ನ್ಯಾಶನಲ್ ಡಿಫೆನ್ಸ್ ಅಕಾಡೆಮಿ ಭಾರತದ ಸಶಸ್ತ್ರ ಪಡೆಯ ಯೋಧರಿಗೆ ತರಬೇತಿ ನೀಡುವ ಪ್ರತಿಷ್ಠಿತ ಸಂಸ್ಥೆಯಾಗಿದ್ದು ಇಲ್ಲಿನ ಪ್ರವೇಶಕ್ಕೆ ವಾರ್ಷಿಕ ಪ್ರವೇಶ ಪರೀಕ್ಷೆ ನಡೆಸಲಾಗುತ್ತದೆ.

ಪಶ್ಚಿಮ ಬಂಗಾಳದಲ್ಲಿ ಚುನಾವಣೋತ್ತರ ಹಿಂಸೆಗಳಿಗೆ ಸಂಬಂಧಿಸಿದಂತೆ ತನಿಖೆ ನಡೆಸಲು ಸಿಬಿಐಗೆ ಕೋಲ್ಕತ್ತಾ ಹೈಕೋರ್ಟ್ ಆದೇಶ ನೀಡಿದ್ದು ವಿಶೇಷ ತನಿಖಾ ತಂಡಗಳ (ಎಸ್‌ಐಟಿ) ಘಟನೆ ಮಾಡಲು ಹೈಕೋರ್ಟ್ ಆದೇಶಿಸಿದೆ. ಇತ್ತೀಚೆಗೆ ಪಶ್ಚಿಮ ಬಂಗಾಳದಲ್ಲಿ ಚುನಾವಣೆ ನಡೆದ ಬಳಿಕ ನಡೆದ ಹಿಂಸಾಚಾರದ ಕುರಿತು ತನಿಖೆ ನಡೆಸುತ್ತಿರುವ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ತನ್ನ ಅಂತಿಮ ವರದಿಯನ್ನು ಕೋಲ್ಕತ್ತಾ ಹೈಕೋರ್ಟ್‌ಗೆ ಸಲ್ಲಿಕೆ ಮಾಡಿತ್ತು. ಆಯೋಗ ಸಲ್ಲಿಸಿದ ವರದಿಯಲ್ಲಿ, 'ಈ ಹಿಂಸೆಯು ಆಡಳಿತ ಪಕ್ಷ ವಿರೋಧ ಪಕ್ಷಗಳ ಬೆಂಬಲಿಗರ ವಿರುದ್ಧ ನಡೆಸಿದ ಪ್ರತೀಕಾರದ ಹಿಂಸಾಚಾರವಾಗಿದೆ. ರಾಜ್ಯದಲ್ಲಿ ನಡೆದ ಹಿಂಸಾತ್ಮಕ ಘಟನೆಗಳ ಬಗ್ಗೆ ಆಡಳಿತದಲ್ಲಿರುವ ರಾಜ್ಯ ಸರ್ಕಾರ ನಿರಾಸಕ್ತಿ ಹೊಂದಿದೆ. ಈ ಹಿಂಸೆ ಸಾವಿರಾರು ಜನ ಸಾಮಾನ್ಯರ ಜೀವನ, ಜೀವನೋಪಾಯಗಳೆರಡರ ಮೇಲೆಯೂ ವ್ಯತಿರಿಕ್ತ ಪರಿಣಾಮ ಬೀರಿದೆ. ಆರ್ಥಿಕ ಸಮಸ್ಯೆಯನ್ನು ಈ ಹಿಂಸಾಚಾರದ ಸಂತ್ರಸ್ತರು ಅನುಭವಿಸುವಂತಾಗಿದೆ' ಎಂದು ತಿಳಿಸಿದೆ.

## ಸಾಲುದ್ದದ ಸುದ್ದಿಗಳು

ಬಾಂಗ್ಲಾದೇಶದ ಹಿಂದೂ ಅಲ್ಪಸಂಖ್ಯಾತ ಗ್ರಾಮ ಖುಲ್ನಾದಲ್ಲಿ ನಡೆದ ದಾಳಿಗೆ ಸಂಬಂಧಿಸಿದಂತೆ ಅಲ್ಲಿನ ಅಲ್ಪಸಂಖ್ಯಾತರ ರಕ್ಷಣೆಗೆ ಕ್ರಮ ಕೈಗೊಳ್ಳಬೇಕು ಎಂದು ವಿಶ್ವಹಿಂದೂ ಪರಿಷತ್ ಭಾನುವಾರ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಮತ್ತು ಯುರೋಪಿನ ಯೂನಿಯನ್ ಮುಖ್ಯಸ್ಥರಿಗೆ ಪತ್ರವನ್ನು ಬರೆದಿದೆ. ವರದಿಗಳ ಪ್ರಕಾರ ಇತ್ತೀಚೆಗೆ ಖುಲ್ನಾ ಪ್ರದೇಶದಲ್ಲಿ ಅನೇಕ ದೇಗುಲಗಳ ಮೇಲೆ ಮತ್ತು ಹಿಂದೂಗಳ ಅಂಗಡಿ–ಮನೆಗಳ ಮೇಲೆ ಮುಸ್ಲಿಂ ಮೂಲಭೂತವಾದಿಗಳು ದಾಳಿ ನಡೆಸಿ ಧ್ವಂಸಗೊಳಿಸಿದ್ದಾರೆ. ಮಧ್ಯಸ್ಥಿಕೆ ವಹಿಸಿ ಘಟನೆಗೆ ಸಂಬಂಧಿಸಿದಂತೆ ಬಾಂಗ್ಲಾ ಸರ್ಕಾರ ಕಠಿಣ ಕ್ರಮವನ್ನು ಕೈ ಗೊಳ್ಳುವಂತೆ ಮಾಡಬೇಕು ಎಂದು ವಿಶ್ವಹಿಂದೂ ಪರಿಷತ್ ಮನವಿ ಮಾಡಿದೆ. ಬಾಂಗ್ಲಾದೇಶದಲ್ಲಿ ಹಿಂದುಗಳನ್ನು ಬಲವಂತದಿಂದ ಮತಾಂತರ ಮಾಡಲಾಗುತ್ತಿದೆ, ಹಿಂದುಗಳ ಆಸ್ತಿಯನ್ನು ಮೂಲಭೂತವಾದಿಗಳು ಅತಿಕ್ರಮಣ ಮಾಡುತ್ತಿದ್ದಾರೆ ಎಂದು ಆರೋಪಿಸಿದೆ. ಬಾಂಗ್ಲಾದಲ್ಲಿ ಅಲ್ಪಸಂಖ್ಯಾತ ಹಿಂದೂಗಳು ಮುಸ್ಲಿಂ ಮೂಲಭೂತವಾದಿಗಳ ದಾಳಿಗೆ ನಿರಂತರ ಗುರಿಯಾಗುತ್ತಿರುವುದು ಗಮನಿಸಬೇಕಾದ ಕಳವಳಕಾರಿ ಸಂಗತಿ.



ಇನ್ನೊಂದೆಡೆ ಇತ್ತೀಚೆಗೆ ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿ ನಡೆದ ಹಿಂದೂ ದೇವಾಲಯದ ಮೇಲಿನ ದಾಳಿ ಕುರಿತಂತೆ ಭಾರತ ಪ್ರತಿಭಟನೆ ವ್ಯಕ್ತಪಡಿಸಿದ ಬೆನ್ನಲ್ಲೇ, ಅಲ್ಲಿನ ಪ್ರಧಾನಿ ಇಮ್ರಾನ್ ಖಾನ್ ಈ ಘಟನೆಯನ್ನು ಖಂಡಿಸಿ, ಆರೋಪಿಗಳನ್ನು ಬಂಧಿಸುವುದಾಗಿ ತಿಳಿಸಿದ್ದಾರೆ ಎಂದು ವರದಿಯಾಗಿದೆ. ಪಾಕ್‌ನ ಬೋಂಗ್ ನಗರದ ಸಿದ್ದಿ ವಿನಾಯಕ ದೇಗುಲ ಮತ್ತು ಮೂರ್ತಿಯನ್ನು ಅಲ್ಲಿನ ಗುಂಪೊಂದು ನಾಶಗೊಳಿಸಿ, ಸುಟ್ಟು ಹಾಕುವ ಯತ್ನ ನಡೆಸಿತ್ತು. ಇದಕ್ಕೆ ಭಾರತದಲ್ಲಿ ವ್ಯಾಪಕ ವಿರೋಧ ವ್ಯಕ್ತವಾಗಿತ್ತು. ಭಾರತದ ಪ್ರತಿಭಟನೆಯಿಂದ ಎಚ್ಚೆತ್ತ ಇಮ್ರಾನ್ ಖಾನ್ ದೇವಾಲಯವನ್ನು ಪುನರ್‌ನಿರ್ಮಾಣ ಮಾಡಿಕೊಡುವ ಭರವಸೆ ನೀಡಿದ್ದಾರೆ. ಇದರ ಬೆನ್ನಲ್ಲೇ ಲಾಹೋರ್ ನಗರದಲ್ಲಿರುವ ಮಹಾರಾಜ ರಣಜಿತ್ ಸಿಂಗ್ ಅವರ ಕಂಚಿನ ಪುತ್ಥಳಿಯನ್ನು ಮುಸ್ಲಿಂ ಮೂಲಭೂತವಾದಿ ಪುಂಡರು ಎಳೆದಾಡಿ ಧ್ವಂಸಗೊಳಿಸಿರುವ ಘಟನೆ ನಡೆದಿದೆ. ಈ ಸಂಬಂಧ ಓರ್ವನನ್ನು ಬಂಧಿಸಲಾಗಿದ್ದು ಕೃತ್ಯದಲ್ಲಿ ಪಾಲ್ಗೊಂಡವರು ತೆಹ್ರೀಕ್–ಎ–ಲಬಾಯಕ್ ಪಾಕಿಸ್ತಾನ್ ಹೆಸರಿನ ರಾಜಕೀಯ ಪಕ್ಷಕ್ಕೆ ಸೇರಿದವರಾಗಿದ್ದಾರೆ. 2019ರಲ್ಲಿ ಸ್ಥಾಪಿಸಲಾದ ಈ ಪುತ್ಥಳಿಯ ಮೇಲೆ ಇದುವರೆಗೆ ಅನೇಕ ಬಾರಿ ದಾಳಿಗಳಾಗಿವೆ.




2024ರ ಒಳಗೆ ದೇಶದ ಆರು ಲಕ್ಷ ಹಳ್ಳಿಗಳನ್ನು ಡಿಜಿಟಲ್ ಗ್ರಾಮಗಳನ್ನಾಗಿ ಮಾಡಲಾಗುವುದು ಎಂದು ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವ ರಾಜೀವ್ ಚಂದ್ರಶೇಖರ್ ತಿಳಿಸಿದ್ದಾರೆ. ಪ್ರಾಯೋಗಿಕ ಯೋಜನೆಯಡಿ ದೇಶದ ಐದು ಸಾವಿರ ಹಳ್ಳಿಗಳನ್ನು ಡಿಜಿಟಲ್ ಗ್ರಾಮವನ್ನಾಗಿ ಮಾಡುವ ಕಾರ್ಯಯೋಜನೆ ಆರಂಭವಾಗಿದ್ದು ಈ ಹಳ್ಳಿಗಳಲ್ಲಿ ಪ್ರತಿ ಮನೆಗೆ ಇಂಟರ್ನೆಟ್ ಸಂಪರ್ಕ ಒದಗಿಸಲಾಗುತ್ತದೆ ಎಂದು ಅವರು ಹೇಳಿದ್ದಾರೆ. ಇಂದಿನ ಮಾಹಿತಿ ಯುಗದಲ್ಲಿ ಡಿಜಿಟಲ್ ಸಾಕ್ಷರತೆಯೂ ಕೂಡ ಮಹತ್ವದ್ದಾಗಿದ್ದು ಸಮರ್ಪಕ ಅಂತರ್ಜಾಲ ಸಂಪರ್ಕ ಆರ್ಥಿಕ ಸೇವೆ, ಶಿಕ್ಷಣ, ವೈದ್ಯಕೀಯ ಸೇವೆ, ಮನೆಯಿಂದಲೇ ಕೆಲಸ ಮೊದಲಾದವುಗಳಲ್ಲಿ ಅನೇಕ ಅವಕಾಶಗಳನ್ನು ಗ್ರಾಮೀಣ ಭಾಗದಲ್ಲಿ ತೆರೆಯಲಿದೆ.

ರಾಜ್ಯದ ಸಾರ್ವಜನಿಕ ಗ್ರಂಥಾಲಯ ಇಲಾಖೆಯಡಿ ಕಾರ್ಯ ನಿರ್ವಹಿಸುತ್ತಿರುವ ಕರ್ನಾಟಕ ಡಿಜಿಟಲ್ ಸಾರ್ವಜನಿಕ ಗ್ರಂಥಾಲಯದಲ್ಲಿ ನೋಂದಾಯಿಸಿಕೊಂಡವರ ಸಂಖ್ಯೆ 1 ಕೋಟಿ ದಾಟಿದೆ. ಡಿಜಿಟಲ್ ಗ್ರಂಥಾಲಯ ಸೌಲಭ್ಯವನ್ನು ರಾಜ್ಯದ 26 ನಗರ ಕೇಂದ್ರ ಗ್ರಂಥಾಲಯಗಳು, 30 ಜಿಲ್ಲಾ ಕೇಂದ್ರ ಗ್ರಂಥಾಲಯಗಳು, 216 ತಾಲೂಕು ಗ್ರಂಥಾಲಯಗಳು, ಸೇರಿದಂತೆ ಒಟ್ಟು 272 ಸಾರ್ವಜನಿಕ ಗ್ರಂಥಾಲಯಗಳಲ್ಲಿ ಜಾರಿಗೆ ತರಲಾಗಿದೆ. ಕೊರೋನಾ ಬಳಿಕ ಈ ಗ್ರಂಥಾಲಯಗಳಲ್ಲಿ ಡಿಜಿಟಲೀಕರಣಕ್ಕೆ ಹೆಚ್ಚು ಆದ್ಯತೆ ನೀಡಲಾಗಿತ್ತು. www.karnatakadigitalpubliclibrary.org/login ಈ ಕೊಂಡಿಯನ್ನು ಬಳಸಿ ಡಿಜಿಟಲ್ ಲೈಬ್ರರಿಯಲ್ಲಿ ನೋಂದಾಯಿಸಿಕೊಳ್ಳಬಹುದು.

ಹಾಸನ ಜಿಲ್ಲೆಯ ವಿಶ್ವವಿಖ್ಯಾತ ಜೈನ ತೀರ್ಥಕ್ಷೇತ್ರ ಶ್ರವಣಬೆಳಗೊಳದ ಸಮೀಪದಲ್ಲಿರುವ ನಾಗಯ್ಯನ ಕೊಪ್ಪಲು ಪ್ರದೇಶದಲ್ಲಿ 10ನೇ ಶತಮಾನಕ್ಕೆ ಸೇರಿದ ಶಾಸನವೊಂದು ಕೃಷಿ ಚಟುವಟಿಕೆ ನಡೆಸುವ ಸಂದರ್ಭದಲ್ಲಿ ಪತ್ತೆಯಾಗಿದೆ. ಶಾಸನ ದೊರೆತ ಸ್ಥಳಕ್ಕೆ ಪುರಾತತ್ವ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ, ಮಾಹಿತಿ ಕಲೆ ಹಾಕಿದ್ದು ಐತಿಹಾಸಿಕ ಸ್ಮಾರಕಗಳು, ಶಿಲ್ಪಗಳನ್ನು ಸಂರಕ್ಷಣೆ ಮಾಡುವ ವಸ್ತುಸಂಗ್ರಹಾಲಯಕ್ಕೆ ಈ ಶಾಸನವನ್ನು ಸ್ಥಳಾಂತರ ಮಾಡಲಾಗುತ್ತದೆ; ಶಾಸನದಲ್ಲಿ ಮೌರ್ಯ ವಂಶದ ಜೈನ ಧರ್ಮ ಮತ್ತು ದೊರೆ ಚಂದ್ರಗುಪ್ತನ ಬಗ್ಗೆ ಮಾಹಿತಿ ಇದೆ ಎಂದು ತಿಳಿಸಿದ್ದಾರೆ.

ಸತತ ಮೂರನೇ ವರ್ಷವೂ ನವದೆಹಲಿಯ ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಭಾರತ ಮತ್ತು ಮಧ್ಯ ಏಷ್ಯಾದ 'ಅತ್ಯುತ್ತಮ ವಿಮಾನ ನಿಲ್ದಾಣ' ಎಂಬ ಕೀರ್ತಿಗೆ ಭಾಜನವಾಗಿದೆ. ಏರ್‌ಪೋರ್ಟ್ ಉದ್ಯಮಕ್ಕೆ ಸಂಬಂಧಿಸಿದಂತೆ ಪ್ರತಿಷ್ಠಿತ ಪ್ರಶಸ್ತಿಯಾದ 'ಸ್ಕೈಟ್ರ್ಯಾಕ್ಸ್ ವರ್ಲ್ಡ್ ಏರ್‌ಪೋರ್ಟ್ ಅವಾರ್ಡ್' ನಡೆಸಿರುವ ಜಾಗತಿಕ ವಿಮಾನ ನಿಲ್ದಾಣ ಗ್ರಾಹಕರ ತೃಪ್ತಿ ಸಮೀಕ್ಷೆಯಲ್ಲಿ, ವಿಶ್ವದ ಅಗ್ರ 50 ವಿಮಾನ ನಿಲ್ದಾಣಗಳಲ್ಲಿ ಭಾರತದ ನವದೆಹಲಿ ವಿಮಾನ ನಿಲ್ದಾಣ 45ನೇ ಸ್ಥಾನ ಪಡೆದಿದ್ದು ಇದು ವಿಶ್ವದ ಅಗ್ರ ವಿಮಾನ ನಿಲ್ದಾಣಗಳಲ್ಲಿ ಸ್ಥಾನ ಪಡೆದ ಭಾರತದ ಏಕೈಕ ವಿಮಾನ ನಿಲ್ದಾಣವಾಗಿದೆ.

ಹೊಸ ಸರ್ಕಾರದ ಅಧಿಕಾರ ವಹಿಸಿಕೊಂಡಂದಿನಿಂದ ಹಲವು ಪ್ರಮುಖ ನಿರ್ಧಾರಗಳನ್ನು ಜಾರಿಗೊಳಿಸುವ ಮೂಲಕ ಮಾದರಿಯಾಗಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಇದೀಗ ಮತ್ತೊಂದು ಮಹತ್ವದ ನಿರ್ಣಯ ಪ್ರಕಟಿಸಿದ್ದು ಸರ್ಕಾರಿ ಸಮಾರಂಭಗಳಲ್ಲಿ ಹಾರ, ತುರಾಯಿ ನಿಷೇಧ ಹಾಗೂ ಶುಭಾಶಯ ಕೋರಿ ಬ್ಯಾನರ್ ಅಳವಡಿಸದಂತೆ ಸೂಚಿಸಿದ್ದಾರೆ. ಹಾಗೆಯೇ ಅನಗತ್ಯ ಪೊಲೀಸ್ ಗೌರವ ವಂದನೆ ನೀಡುವುದನ್ನೂ ನಿರಾಕರಿಸಿದ್ದು ಬೆಂಗಳೂರು ನಗರಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ, ಸಚಿವರು ಸೇರಿದಂತೆ ಯಾರೇ ಗಣ್ಯರು ಹೋಗುವ ಸಂದರ್ಭದಲ್ಲಿಯೂ ಝೀರೋ ಟ್ರಾಫಿಕ್ ವ್ಯವಸ್ಥೆ ಅನುಸರಿಸದಂತೆ ಸೂಚಿಸಿದ್ದಾರೆ. ಹಾಗೆಯೇ ರಾಜ್ಯ ಗೃಹ ಸಚಿವ ಅರಗ ಜ್ಞಾನೇಂದ್ರ ಅವರೂ ಸಹ ಪ್ರಯಾಣದ ಸಮಯದಲ್ಲಿ ಶೂನ್ಯ ಟ್ರಾಫಿಕ್ ನಿರಾಕರಿಸಿದ್ದಾರೆ. ಈ ಮಾದರಿ ನಡೆ ಸಾರ್ವಜನಿಕರ ಮೆಚ್ಚುಗೆಗೆ ಒಳಗಾಗಿದೆ.

Date of Publication 25 AUGUST 2021

REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23

FORTNIGHTLY 01-09-2021

पुंगव PUNGAVA

# 74, Ranga Rao Road, Shankarapuram, Bangalore - 560 004. Ph: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00



## ಗುಜರಾತಿನ 'ಮಾಧಾಪರ' ವಿಶ್ವದ ಶ್ರೀಮಂತ ಹಳ್ಳಿ

ಸುಮಾರು 7600 ಮನೆಗಳಿರುವ ಈ ಹಳ್ಳಿಯಲ್ಲಿ 17 ಬ್ಯಾಂಕ್‌ಗಳು ಶಾಖೆ ತೆರೆದು ಕಾರ್ಯ ನಿರ್ವಹಿಸುತ್ತಿವೆ. ಈ ಹಳ್ಳಿಯ ಜನರು ಬ್ಯಾಂಕ್‌ನಲ್ಲಿಟ್ಟಿರುವ ಠೇವಣಿ 5000 ಕೋಟಿಗಳಿಗಿಂತಲೂ ಹೆಚ್ಚು, ಸರಾಸರಿ ತಲಾವಾರು ಠೇವಣಿ ರೂ.15 ಲಕ್ಷಕ್ಕೂ ಮಿಕ್ಕುತ್ತದೆ. ವಿಶ್ವದ ಅತ್ಯಂತ ಶ್ರೀಮಂತ ಹಳ್ಳಿ ಎನ್ನಬಹುದಾದ ಮಾಧಾಪರ ಇರುವುದು ನಮ್ಮದೇ ದೇಶದಲ್ಲಿ, ಗುಜರಾತ್ ರಾಜ್ಯ ಕಛ್ ಜಿಲ್ಲೆಯಲ್ಲಿ.

ಇದಕ್ಕೆ ಒಂದು ಕಾರಣ ಎಂದರೆ ಈ ಹಳ್ಳಿಯ ಬಹುತೇಕ ಮನೆಗಳಲ್ಲಿ ಒಬ್ಬರಲ್ಲ ಒಬ್ಬರು ಇಂಗ್ಲೆಂಡ್, ಅಮೇರಿಕ, ಗಲ್ಫ್, ಆಫ್ರಿಕ ಮೊದಲಾದ ವಿದೇಶಗಳಲ್ಲಿ ನೆಲೆಸಿ ಉನ್ನತ ಉದ್ಯೋಗ–ವ್ಯವಹಾರಗಳಲ್ಲಿ ತೊಡಗಿದ್ದು ದೊಡ್ಡ ಪ್ರಮಾಣದಲ್ಲಿ ಹಣ ಮರುಸಂದಾಯ ಮಾಡುತ್ತಿರುವುದು. ಬಹುತೇಕ ಪಟೇಲ್ ಸಮುದಾಯಕ್ಕೆ ಸೇರಿದ ಇಲ್ಲಿನ ಜನರಲ್ಲಿ ಶೇ65ರಷ್ಟು ಅನಿವಾಸಿ ಭಾರತೀಯರಿದ್ದಾರೆ. 1968ರಲ್ಲಿಯೇ ಲಂಡನ್‌ನಲ್ಲಿ ಮಾಧಾಪರದ ಜನರನ್ನು ಬೆಸೆಯುವ ಸಲುವಾಗಿ 'ಮಾಧಾಪರ ಗ್ರಾಮ ಸಂಘ' ಆರಂಭವಾಗಿತ್ತು. ಇಂತಹ ಅನೇಕ ಅನಿವಾಸಿ ಭಾರತೀಯರು ದೊಡ್ಡ ಪ್ರಮಾಣದಲ್ಲಿ ದುಡಿದು ಹಳ್ಳಿಗೆ ಮರಳಿ ಅನೇಕ ಉದ್ಯಮಗಳನ್ನೂ ಆರಂಭಿಸಿ ಹಳ್ಳಿಯ ಆದಾಯಕ್ಕೆ ಗಣನೀಯ ಕೊಡುಗೆ ನೀಡುತ್ತಿದ್ದಾರೆ.

## ಏಟಿಎಂ ಜನಕನ ಜನ್ಮಸ್ಥಳದಲ್ಲಿ ಎಸ್‌ಬಿಐ ಏಟಿಎಂ ಆರಂಭ




ಜಾನ್ ಏಡ್ರಿಯನ್ ಶೆಫರ್ಡ್–ಬ್ಯಾರನ್ ಭಾರತದಲ್ಲಿ ಜನಿಸಿದ ಸ್ಕಾಟಿಷ್ ಸಂಶೋಧಕ. ಆತನ ತಂದೆ ವಿಲ್‌ಫ್ರೆಡ್ ಶೆಫರ್ಡ್ ಬ್ಯಾರನ್ ಬ್ರಿಟಿಷ್ ಆಡಳಿತದಲ್ಲಿ ಉತ್ತರ ಬಂಗಾಳದಲ್ಲಿ ಚಿತ್‌ಗಾಂಗ್ ಪೋರ್ಟ್ ಕಮಿಶನರ್‌ನಲ್ಲಿ ಮುಖ್ಯ ಇಂಜಿನಿಯರ್ ಆಗಿದ್ದರು. ಜಾನ್ ಜನಿಸಿದ್ದು ಮೇಘಾಲಯದ ಶಿಲ್ಲಾಂಗ್‌ನ ಡಾ ಎಚ್. ಗೋರ್ಡನ್ ರಾಬರ್ಟ್ ಆಸ್ಪತ್ರೆಯಲ್ಲಿ, 1925ರಲ್ಲಿ.

1965ರಲ್ಲೇ ಸ್ವಸಹಾಯ ಪದ್ಧತಿಯ ಮುಖಾಂತರ ನಗದು ಪಡೆಯುವ ವ್ಯವಸ್ಥೆಯನ್ನು ರೂಪಿಸುವ ಹಾಗೂ ಆ ಮೂಲಕ ಬ್ಯಾಂಕ್‌ಗಳ ನಗದು ಕೌಂಟರಿಗೆ ತಿಲಾಂಜಲಿ ನೀಡುವ ಕಲ್ಪನೆಯನ್ನು ಜಾನ್ ವಿನ್ಯಾಸಗೊಳಿಸಿದ್ದರು. ಇಂದು ಎಲ್ಲೆಡೆ ಕಾಣುವ ಆಟೋಮೇಟೆಡ್ ಟೆಲ್ಲರ್ ಮಶೀನ್ – ಏಟಿಎಂ ಮೊದಲು ಸ್ಥಾಪನೆಯಾಗಿದ್ದು 1967ರಲ್ಲಿ ಲಂಡನ್‌ನ ಎನ್‌ಫೀಲ್ಡ್ ಪ್ರದೇಶದ ಬಾರ್ಕ್‌ಲೇಯ್ಸ್ ಬ್ಯಾಂಕ್ ಶಾಖೆಯಲ್ಲಿ. ಅದನ್ನು ಸ್ಥಾಪಿಸಿದ ತಂಡದ ನೇತೃತ್ವ ವಹಿಸಿದ್ದು ಜಾನ್ ಏಡ್ರಿಯನ್.

ಇದೀಗ 53 ವರ್ಷಗಳ ಬಳಿಕ ಜಾನ್ ಜನಿಸಿದ ಶಿಲ್ಲಾಂಗ್ ಆಸ್ಪತ್ರೆಯ ಆವರಣದಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್ ಏಟಿಎಂ ಸ್ಥಾಪಿಸಿ, ಏಟಿಎಂ ಜನಕನಿಗೆ ಗೌರವ ಸಲ್ಲಿಸಿದೆ.

## ಆಗಸ್ಟ್ 14 – ದೇಶವಿಭಜನೆಯ ಕರಾಳತೆಯ ನೆನಪಿನ ದಿನವಾಗಿ ಆಚರಣೆ

ಸ್ವಾತಂತ್ರ್ಯ ದಿವಸದ ಮುನ್ನಾ ದಿನ ಆಗಸ್ಟ್ 14 ದೇಶದ ವಿಭಜನೆಯ ದುರಂತ ನಡೆದ ದಿನವಾಗಿದ್ದು, ಅಖಂಡ ಭಾರತ ವಿಭಜನೆಯ ಕರಾಳತೆಯನ್ನು ನೆನಪಿಸುತ್ತದೆ. ಈ ನೆನಪಿನ ಹಿನ್ನೆಲೆಯಲ್ಲಿ ಆಗಸ್ಟ್ 14ನ್ನು ದೇಶ ವಿಭಜನೆಯ ಕರಾಳ ನೆನಪಿನ ದಿನವನ್ನಾಗಿ ಆಚರಿಸಲಾಗುವುದು ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಹೇಳಿದ್ದಾರೆ.



ಸಾಮಾಜಿಕ ಜಾಲತಾಣದಲ್ಲಿ ಹೇಳಿಕೆ ನೀಡಿರುವ ಅವರು 'ವಿಭಜನೆಯ ನೋವನ್ನು ಎಂದಿಗೂ ಮರೆಯಲಾಗದು. ದ್ವೇಷ ಮತ್ತು ಹಿಂಸಾಚಾರದಿಂದಾಗಿ ನಮ್ಮ ಲಕ್ಷಾಂತರ ಸಹೋದರ ಸಹೋದರಿಯರು ಸ್ಥಳಾಂತರಗೊಂಡಿದ್ದರು. ಅನೇಕರು ಪ್ರಾಣ ಕಳೆದುಕೊಂಡಿದ್ದರು. ನಮ್ಮ ಜನರು ಪಟ್ಟ ಪಾಡುಗಳು ಮತ್ತು ತ್ಯಾಗದ ನೆನಪಿಗಾಗಿ ಆಗಸ್ಟ್ 14 ಅನ್ನು ವಿಭಜನೆಯ ಕರಾಳ ನೆನಪಿನ ದಿನವನ್ನಾಗಿ ಪರಿಗಣಿಸಲಾಗುವುದು. 'ವಿಭಜನೆಯ ಕರಾಳ ನೆನಪಿನ ದಿನ'ವು ಸಾಮಾಜಿಕ ವಿಭಜನೆ, ಅಸಾಮರಸ್ಯದ ವಿಷವನ್ನು ತೆಗೆದುಹಾಕುವ ಅಗತ್ಯವನ್ನು ನೆನಪಿಸುತ್ತದೆ. ಏಕತೆ, ಸಾಮಾಜಿಕ ಸಾಮರಸ್ಯ ಮತ್ತು ಮಾನವ ಸಬಲೀಕರಣದ ಮನೋಭಾವವನ್ನು ಇನ್ನಷ್ಟು ಬಲಪಡಿಸಲಿದೆ' ಎಂದು ಅವರು ಆಶಿಸಿದ್ದಾರೆ.

ನೆರೆಯ ರಾಷ್ಟ್ರ ಪಾಕಿಸ್ತಾನದಲ್ಲಿ ಆಗಸ್ಟ್ 14 ಸ್ವಾತಂತ್ರ್ಯ ದಿನವನ್ನಾಗಿ ಆಚರಿಸಲಾಗುತ್ತಿದೆ. ವಾಸ್ತವವಾಗಿ ಆಗಸ್ಟ್ 14 ಅಖಂಡ ಭಾರತದ ಇತಿಹಾಸದಲ್ಲೇ ಅತ್ಯಂತ ಕರಾಳ ದಿನವಾಗಿದೆ. ದೇಶ ವಿಭಜನೆಯ ಜೊತೆಗೆ ಮೂಲಭೂತವಾದಿಗಳ ಮತ್ತು ಮತಾಂಧರ ದೌರ್ಜನ್ಯಕ್ಕೆ ಸಿಕ್ಕಿದ ಲಕ್ಷಾಂತರ ಮಂದಿ ನಿರ್ಗತಿಕರಾಗಿ ತಮ್ಮ ಎಲ್ಲವನ್ನೂ ಕಳೆದುಕೊಂಡು ಪ್ರಾಣ ಉಳಿಸಿಕೊಳ್ಳಲು ಪಲಾಯನಗೈಯಬೇಕಾದ ಪರಿಸ್ಥಿತಿ ನಿರ್ಮಾಣವಾದ ದುರಂತದ ದಿನ ಅಗಸ್ಟ್ 14.

## ರೈತರ ಮಕ್ಕಳಿಗೆ ಶಿಷ್ಯವೇತನ – ಸರ್ಕಾರದ ಆದೇಶ ಜಾರಿ

ಕರ್ನಾಟಕದ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಬಸವರಾಜ ಬೊಮ್ಮಾಯಿಯವರು ಘೋಷಣೆ ಮಾಡಿದ್ದ ಯೋಜನೆಯಂತೇ ಇದೀಗ ರಾಜ್ಯ ಸರ್ಕಾರ ರೈತರ ಮಕ್ಕಳಿಗೆ ಶಿಷ್ಯ ವೇತನ ನೀಡುವ ಬಗ್ಗೆ ಅಧಿಕೃತ ಆದೇಶ ಹೊರಿಡಿಸಿದ್ದು ಪ್ರಸಕ್ತ 2020–21ರ ಸಾಲಿನಲ್ಲೇ ಜಾರಿಗೊಳ್ಳಲಿದೆ. ಕೃಷಿ ಇಲಾಖೆ ಈ ಶಿಷ್ಯವೇತನ ಯೋಜನೆಯನ್ನು ಜಾರಿಗೊಳಿಸಲಿದೆ.

ಪಿಯುಸಿ, ಐಟಿಐ ಅಥವಾ ತತ್ಸಮಾನ ತರಗತಿಗಳಲ್ಲಿ ಓದುತ್ತಿರುವ ಬಾಲಕರಿಗೆ 2,500 ಮತ್ತು ಬಾಲಕಿಯರಿಗೆ ತಲಾ 3,000ರೂ., ಪದವಿ, ಎಂಬಿಬಿಎಸ್, ಎಂಜಿನಿಯರಿಂಗ್ ಪದವಿ ಹಾಗೂ ಪದವಿಗೆ ಸಮನಾದ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ತಲಾ 5,000 ಮತ್ತು ವಿದ್ಯಾರ್ಥಿನಿಯರಿಗೆ ತಲಾ 5,500ರೂ., ಕಾನೂನು ಪದವಿ, ಅರೆ ವೈದ್ಯಕೀಯ, ಬಿ. ಫಾರ್ಮಾ, ನರ್ಸಿಂಗ್ ಮತ್ತು ಇತರ ವೃತ್ತಿಪರ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ 7,500 ಮತ್ತು ವಿದ್ಯಾರ್ಥಿನಿಯರಿಗೆ 8,000, ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ಎಲ್ಲ ಸ್ನಾತಕೋತ್ತರ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ 10,000, ವಿದ್ಯಾರ್ಥಿನಿಯರಿಗೆ 11,000 ಶಿಷ್ಯವೇತನ ಘೋಷಿಸಲಾಗಿದೆ. ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳ ಪೋಷಕರು ಸಾಗುವಳಿ ಮಾಡುತ್ತಿರುವ ಕೃಷಿ ಜಮೀನು ಹೊಂದಿರಬೇಕು. ಪೋಷಕರು ಇಲ್ಲವಾದಲ್ಲಿ, ವಿದ್ಯಾರ್ಥಿಗಳ ಹೆಸರಿನಲ್ಲಿ ಕೃಷಿ ಜಮೀನು ಇರಬೇಕು. ಈ ಯೋಜನೆಯಡಿ ಒಬ್ಬ ವಿದ್ಯಾರ್ಥಿ ಒಮ್ಮೆ ಮಾತ್ರ ಶಿಷ್ಯವೇತನ ಪಡೆಯಬಹುದು ಎಂದು ಆದೇಶದಲ್ಲಿ ತಿಳಿಸಲಾಗಿದೆ. ರಾಜ್ಯ ಸರ್ಕಾರದ ಅನುದಾನದಲ್ಲಿ ನೀಡುವ ಇತರೆ ಸಾಮಾನ್ಯ ಶಿಷ್ಯವೇತನಗಳನ್ನು ಯೋಜನೆಯ ಫಲಾನುಭವಿಗಳು ಆ ಅವಧಿಯಲ್ಲಿ ಪಡೆಯುವಂತಿಲ್ಲ. ಮೆರಿಟ್, ಅರ್ಹತಾ ಪರೀಕ್ಷೆ, ರ್‍ಯಾಂಕ್ ಆಧಾರದಲ್ಲಿ ನೀಡುವ ಶಿಷ್ಯವೇತನ ಅಥವಾ ಪ್ರಶಸ್ತಿಗಳಿಗೆ ಈ ನಿರ್ಬಂಧ ಅನ್ವಯಿಸುವುದಿಲ್ಲ. ಯಾವುದೇ ಶೈಕ್ಷಣಿಕ ವರ್ಷದಲ್ಲಿ ಅನುತ್ತೀರ್ಣ ಹೊಂದಿ ವಿದ್ಯಾಭ್ಯಾಸ ಪುನರಾವರ್ತನೆಯಾದರೇ, ವಿದ್ಯಾರ್ಥಿಗಳು ಶಿಕ್ಷಣವೇತನವನ್ನು ಪಡೆಯಲು ಅರ್ಹತೆ ಇರುವುದಿಲ್ಲ. ಆನ್‌ಲೈನ್ ಮೂಲಕ ಶಿಷ್ಯವೇತನಕ್ಕೆ ಅರ್ಜಿ ಸಲ್ಲಿಸುವ ವ್ಯವಸ್ಥೆ ಜಾರಿಗೊಳ್ಳಬೇಕಿದೆ.

## ಕ್ರೀಡಾ ಪ್ರೋತ್ಸಾಹಕ್ಕೆ 1000 ಖೇಲೋ ಇಂಡಿಯಾ ಕೇಂದ್ರಗಳ ಸ್ಥಾಪನೆ – ಪ್ರಧಾನಿ

ದೇಶದ ಸ್ಥಳೀಯ ಕ್ರೀಡಾ ಪ್ರತಿಭೆಗಳನ್ನು ಉತ್ತೇಜಿಸಲು ದೇಶಾದ್ಯಂತ ಸುಮಾರು 1000 ಖೇಲೋ ಇಂಡಿಯಾ ಕೇಂದ್ರಗಳ ಸ್ಥಾಪನೆ ಮಾಡುವುದಾಗಿ ಪ್ರಧಾನಿ ಮೋದಿ ತಿಳಿಸಿದ್ದಾರೆ. ಈಗಾಗಲೇ ದೇಶದಲ್ಲಿ 360 ಖೇಲೋ ಇಂಡಿಯಾ ಕೇಂದ್ರಗಳಿವೆ. ಕೇಂದ್ರ ಸರ್ಕಾರ ಕ್ರೀಡಾಪಟುಗಳನ್ನು ತಲುಪಲು ಪ್ರಯತ್ನ ಮಾಡುತ್ತಿದೆ. ಗ್ರಾಮೀಣ ಭಾಗದ ಕ್ರೀಡಾ ಪ್ರತಿಭೆಗಳನ್ನು ತಲುಪುವ ನಿಟ್ಟಿನಲ್ಲಿ ವಿಶೇಷ ಪ್ರಯತ್ನ ನಡೆಸಲಾಗುತ್ತಿದೆ ಎಂದು ಅವರು ಹೇಳಿದ್ದಾರೆ. ಕ್ರೀಡಾಪಟುಗಳು ದೇಶದ ಯಾವುದೇ ರಾಜ್ಯ, ಪ್ರದೇಶಗಳಿಗೆ ಸೇರಿದವರಾದರೂ, ಯಾವುದೇ ಭಾಷೆ ಮಾತನಾಡುವವರಾದರೂ ಅವರನ್ನು ತಲುಪುವ, ಉತ್ತೇಜನ ನೀಡುವ ನಿಟ್ಟಿನಲ್ಲಿ ಸರ್ಕಾರ ಪ್ರಯತ್ನ ನಡೆಸುತ್ತದೆ. ನಾವು ಭಾರತೀಯ ಕ್ರೀಡಾಪಟುಗಳು ಎಂಬ ಭಾವನೆ ಬರುವಂತೆ ಮಾಡುವುದೇ ಸರ್ಕಾರದ ಉದ್ದೇಶ ಎಂದು ತಿಳಿಸಿದ್ದಾರೆ.

'ದೇಶವು ಪದಕಕ್ಕಾಗಿ ಕ್ರೀಡಾಪಟುಗಳ ಮೇಲೆ ಒತ್ತಡ ಹೇರುವುದಿಲ್ಲ. ಬದಲಾಗಿ ಅತ್ಯುತ್ತಮ ಪ್ರದರ್ಶನ ಮಾತ್ರವೇ ಬಯಸುತ್ತದೆ. ಅವರ ಗೆಲುವು, ಸೋಲುಗಳಲ್ಲಿ ದೇಶವೇ ಅವರ ಜೊತೆಗಿದೆ' ಎಂದು ಮೋದಿ ಹೇಳಿದ್ದಾರೆ.

ಹಾಗೆಯೇ ಜಪಾನ್‌ನಲ್ಲಿ ನಡೆದ ಟೋಕಿಯೋ ಒಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಕಂಚಿನ ಪದಕ ಗೆದ್ದು, ಕೀರ್ತಿ ತಂದುಕೊಟ್ಟ ಬ್ಯಾಡ್ಮಿಂಟನ್ ಆಟಗಾರ್ತಿ ಪಿ. ವಿ. ಸಿಂಧು ಅವರು ವಿಶಾಖಪಟ್ಟಣದಲ್ಲಿ ಕ್ರೀಡಾ ಅಕಾಡೆಮಿ ಮತ್ತು ತರಬೇತಿ ಕೇಂದ್ರ ಆರಂಭಿಸುವುದಾಗಿ ತಿಳಿಸಿದ್ದಾರೆ.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.